CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುಸಹಸ್ರನಾಮ ಪಾರಾಯಣ

ಮಹಾಯಜ್ಞಸಮಿತಿಯು

ಪಾರಾಯಣ ದೀಕ್ಷಿತರಿಗೆಲ್ಲ, ಸೇವಾಕರ್ತರಿಗೂ

ಹಾರ್ದಿಕ ಶುಭಾಶಯಗಳನ್ನು

ಹಾರೈಸುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುಸಹಸ್ರನಾಮ ಮಹಿಮಾ

[ಸ್ತೋತ್ರ ಸಹಿತ]

ಕನ್ನಡ ಇಂಗ್ಲೀಷು, ಹಿಂದೀ ಮತ್ತು ಸಂಸ್ಕೃತ ಭಾಷೆಗಳಲ್ಲಿನ
ಲೇಖನಗಳೊಂದಿಗೆ

ಪ್ರಕಾಶಕರು
ಶ್ರೀ ವಿದ್ಯಾಗಣಪತಿ ಪ್ರಕಾಶನ
3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು - 28

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನು ಈ ಪುಟ್ಟ ಗ್ರಂಥಕ್ಕೆ ಕಲಶಪ್ರಾಯವಾದ ಆಶಂಸೆಗಳನ್ನೂ, ವಿಸ್ತಾರವಾದ ಮುನ್ನುಡಿಯನ್ನು ಅನುಗ್ರಹಿಸಿದ್ದಾರೆ ನಮ್ಮ ಸಂಸ್ಥೆಯ ಗುರಸ್ಥಾನೀಯರಾದ ಪೂಜ್ಯ ಶ್ರೀ ಶ್ರೀ ಶ್ರೀರಂಗಪ್ರಿಯ ಮಹಾಸ್ವಾಮಿಗಳು. ಈ ಉಪಕಾರಕ್ಕಾಗಿ ನಾವು ಚಿರಋಣಿಗಳಾಗಿದ್ದೇವೆ. ಪ್ರಕಾನವು ಆರಂಭಗೊಂಡಾಗ ಲಿಂದ ಗೌರವಾಧ್ಯಕ್ಷರಾಗಿ ಸಂಸ್ಥೆಯ ಪ್ರಕಟಣೆಗಳನ್ನು ಮಾರ್ಗದರ್ಶನ ಮಾಡುತ್ತ ನಮ್ಮ ಇಂದಿನ ಏಳಿಗೆಗೆ ಕಾರಣರಾದ ಶ್ರೀಮಾನ್ ಶೇಷಾಚಲ ಶರ್ಮರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಇವರಿಗೆ ನಮ್ಮ ವಿನಮ್ರ ನಮನಗಳು.

ಅರ್ಥವು ಎಲ್ಲ ಸಾಧನೆಗೂ ಮೂಲದ್ರವ್ಯವಷ್ಟೆ. ಹಾಗಾಗಿ ಈ ಪ್ರಕಟಣೆಗೆ ಉದಾರವಾಗಿ ಆರ್ಥಿಕ ಸಹಾಯವನ್ನು ಮಾಡಿರುವ ಶ್ರೀಮತಿ ಡಿ.ಕೆ. ಲಲಿತಾ ಮೂರ್ತಿ ಮತ್ತು ಮನೋನ್ಮಯಿ ಕ್ರೆಡಿಟ್ ಸಹಕಾರ ಸೊಸೈಟಿಯ ಸಂಸ್ಥಾಪಕರಾದ ಶ್ರೀಗುರುರಾಜ್ ಅವರಿಗೆ ನಮ್ಮ ಕೃತಜ್ಞತೆಗಳು.

ಅಂತೆಯೇ ಮಹಾಜನರೂ ಸಹ ನಮ್ಮನ್ನು ಪ್ರೀತಿಯಿಂದ ಪ್ರೋತ್ಸಾಹಿಸಿ ಇಲ್ಲಿಯವರೆಗೆ ಸುಮಾರು 40 ಲಕ್ಷ ರೂ. ಬೆಲೆಯ ಗ್ರಂಥಗಳನ್ನು ನಮ್ಮಿಂದ ಪ್ರಕಟಿಸಲು ಕಾರಣರಾಗಿದ್ದಾರೆ. ಅವರೆಲ್ಲರಿಗೂ ನಾವು ವಿಶೇಷವಾಗಿ ಆಭಾರಿ ಯಾಗಿದ್ದೇವೆ. ಇದೇ ಉದಾರ ಬೆಂಬಲವನ್ನು ಸತತವಾಗಿ ನೀಡುತ್ತಾ ನಮ್ಮನ್ನು ಅಧಿಕವಾದ ಸೇವೆ ಮಾಡಲು ಪಾತ್ರರನ್ನಾಗಿಸಬೇಕೆಂದು ಬೇಡುತ್ತೇವೆ.

28.2.2000 — ಎ.ಎನ್. ಗಂಗಾಧರಶಾಸ್ತ್ರಿ

ಬೆಂಗಳೂರು — ಗಣಪತಿ ಸೇವಕ ಮತ್ತು ಪ್ರಕಾಶನದ ಸಂಸ್ಥಾಪಕ

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ರೀರಂಗ ಸದ್ಗುರವೇ ನಮಃ ॥

ಶ್ರೀಮತ್ಪರಮಹಂಸೇತ್ಯಾದಿ
ಶ್ರೀ ಶ್ರೀರಂಗಪ್ರಿಯಮಹಾದೇಶಿಕ ಶ್ರೀ ಶ್ರೀಗಳವರಿಂದ
ಆಶೀರ್ವಚನ

ಆರ್ಷಸಂಸ್ಕೃತಿ ಮತ್ತು ಧರ್ಮಗಳಿಗೆ ಸಂಬಂಧಪಟ್ಟ ಅನೇಕ ಉತ್ತಮ ಗ್ರಂಥಗಳನ್ನು ಸುಂದರವೂ ಸುಸ್ಪಷ್ಟವೂ ಆದ ಅಕ್ಷರಗಳಿಂದ ಪುನರ್ಮುದ್ರಣ ಮಾಡಿಸಿ ಆಸ್ತಿಕ ಮಹಾಜನರಿಗೆ ವಿತರಣೆ ಮಾಡುತ್ತಾ ಪುಣ್ಯ ಭಾಜನರಾಗಿರುವ ವೇ। ಬ್ರ। ಶ್ರೀ। ಗಂಗಾಧರಶಾಸ್ತ್ರಿಗಳು ಅದೇ ಪರಂಪರೆಯಲ್ಲಿ ಸುಪ್ರಸಿದ್ಧವಾಗಿರುವ ವಿಷ್ಣುಸಹಸ್ರನಾಮ ಸ್ತೋತ್ರವನ್ನು ಸಮರ್ಪಿಸುತ್ತಿದ್ದಾರೆ. ಅವರ ಈ ಸೇವಾಕಾರ್ಯಕ್ಕೆ ಅದರ ಪ್ರತಿಪಾದ್ಯವಸ್ತುವಾಗಿರುವ ಪರಾದೇವತೆ, ಪರಂ ಬ್ರಹ್ಮ, ಪರಂಧಾಮ, ಪರಂಜ್ಯೋತಿ, ಪರಮಾತ್ಮ, ಪರಮಪುರುಷ ಶ್ರೀಮನ್ನಾರಾಯಣನ ದಿವ್ಯಾನುಗ್ರಹವನ್ನು ಪ್ರಾರ್ಥಿಸುತ್ತೇವೆ.

ಗ್ರಂಥಕ್ಕೆ ಹಿನ್ನೆಲೆಯಾಗಿ ವಾಗ್ದೇವಿಯ ವರಪುತ್ರರಾಗಿರುವ ವಿದ್ವನ್ಮಣಿಗಳಿಂದ ವಿಷ್ಣುಸಹಸ್ರನಾಮದ ವೈಶಿಷ್ಟ್ಯವನ್ನು ಕುರಿತ ವಿಶಿಷ್ಟವಾದ ಲೇಖನಗಳನ್ನು ಶ್ರೀ ಶಾಸ್ತ್ರಿಗಳು ಬರೆಯಿಸಿದ್ದಾರೆ. ಇವೆಲ್ಲವೂ ಉತ್ತಮ ವರ್ಗದ ಬರಹಗಳು. ಮೊದಲನೆಯ ಲೇಖಕರಾದ ವಿದ್ವಾನ್ ಶ್ರೀ ರಂಗನಾಥ ಶರ್ಮರು ನಾಮಜಪದ ವೈಶಿಷ್ಟ್ಯವನ್ನು ಪ್ರಸ್ತಾಪಿಸಿ ವಿಷ್ಣು ಸಹಸ್ರನಾಮದ ಉತ್ಕರ್ಷವನ್ನು ಪ್ರತಿಪಾದಿಸುತ್ತಾ, ಪ್ರಾಸಂಗಿಕವಾಗಿ ಶಿವ ಸಹಸ್ರನಾಮ, ಗಣೇಶ ಸಹಸ್ರನಾಮ ಮುಂತಾದ ಎಲ್ಲ ಆರ್ಷಸ್ತುತಿಗಳೂ ವಿಷ್ಣು ಸಹಸ್ರನಾಮದಂತೆಯೇ ಒಬ್ಬನೇ ಪರಮಾತ್ಮನ ಮಹಿಮೆಯಲ್ಲಿ ತಾತ್ಪರ್ಯವನ್ನು ಹೊಂದಿರುವುದರಿಂದ, ಅವುಗಳಲ್ಲಿ ತಾರತಮ್ಯವನ್ನು ಗಣಿಸಕೂಡದೆಂದು ನಿರೂಪಣೆ ಮಾಡಿದ್ದಾರೆ. ಡಾಕ್ಟರ್ ನಾರಾಯಣರಾಯರು ವಿಷ್ಣುಸಹಸ್ರನಾಮ ಸ್ತೋತ್ರದ ಮಹಿಮೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಗಳ ಜೀವನದ ಕೆಲವು ಘಟನೆಗಳ ಮೂಲಕ ಅವರ ಅನುಭವ ರಸಾಯನವಾಗಿರುವ ವಚನಗಳಿಂದ ಸಾರಿ ಸಮರ್ಥಿಸಿದ್ದಾರೆ. ಪ್ರಾಚಾರ್ಯ ಶ್ರೀಕಂಠಮೂರ್ತಿಗಳು ಶ್ರೀಮನ್ಮಹಾಭಾರತದಲ್ಲಿ ವಿಷ್ಣುಸಹಸ್ರನಾಮವು ಪ್ರಕಾಶನಗೊಂಡ ಸನ್ನಿವೇಶ, ಅದರ ಸ್ಥಾನಮಾನ, ಜನಪ್ರಿಯತೆ, ಅವನ್ನು ಕುರಿತ ಭಾಷ್ಯವ್ಯಾಖ್ಯಾನಗಳನ್ನು ಸಂಕ್ಷೇಪಿಸಿದ್ದಾರೆ. ಡಾ।। ಅನಂತರಂಗಾಚಾರ್ಯರು ಶ್ರೀವಿಷ್ಣುಸಹಸ್ರನಾಮವು ತತ್ತ್ವಹಿತಪುರುಷಾರ್ಥಗಳ ಚಿಂತಾಮಣಿಯಾಗಿದೆ ಯೆಂಬುದನ್ನು ಸವಿಸ್ತರವಾಗಿ ಪ್ರತಿಪಾದಿಸಿದ್ದಾರೆ. ವಿದ್ವಾನ್ ಶೇಷಾಚಲಶರ್ಮರು ಸಂಸ್ಕೃತ ಸ್ತೋತ್ರ ವಾಙ್ಮಯವನ್ನು ಸಂಕ್ಷಿಪ್ತವಾಗಿ ನಿರೂಪಿಸಿ, ಮಂತ್ರದ ಸ್ವರೂಪರೂಪಗಳನ್ನು ನಿಷ್ಕರ್ಷೆ ಮಾಡಿ, ಆ ಹಿನ್ನೆಲೆಯಲ್ಲಿ ಶ್ರೀವಿಷ್ಣು ಸಹಸ್ರನಾಮ ಸ್ತೋತ್ರದ ಮಹಾಮಂತ್ರತ್ವವನ್ನು ಪ್ರತಿಪಾದಿಸಿದ್ದಾರೆ. ಶ್ರೀ ಭಗವಂತನ ಸರ್ವನಾಮಧೇಯಗಳಿಗೂ ಓಂಕಾರವೇ ಮೂಲ ಮಂತ್ರ ವೆಂಬುದನ್ನು ತಿಳಿಸಿ ಪಾರಾಯಣದ ವಿಧಾನ, ಫಲಶ್ರುತಿ ಮುಂತಾದ ಮುಖ್ಯ ವಿಷಯಗಳನ್ನು ಸಾರವತ್ತಾಗಿ ತಿಳಿಸಿದ್ದಾರೆ. ಈ ಸಹಸ್ರನಾಮ ಸ್ತೋತ್ರದಲ್ಲಿ ಪುನರುಕ್ತಿ ದೋಷವಿದೆಯೆಂಬ ಶಂಕಾಕಲಂಕವನ್ನು ನಿವಾರಿಸಿದ್ದಾರೆ. ಈ ಎಲ್ಲ ಅಮೂಲ್ಯಲೇಖನಗಳ ಪರಿಶೀಲನೆಯಿಂದ ವಿಷ್ಣುಸಹಸ್ರನಾಮದ ಅನುಸಂಧಾನಕ್ಕೆ ತುಂಬಾ ಸಹಾಯವಾಗುತ್ತದೆಯೆಂಬುದರಲ್ಲಿ ಸಂದೇಹವಿಲ್ಲ.

ದೇವತಾನಾಮಗಳೆಲ್ಲವೂ ಭಗವಂತನ ಭಕ್ತಿಗೆ ಪೋಷಕವಾಗಿರುವುದರಿಂದ ಸನ್ಮಾನ್ಯವಾಗಿವೆ. ಅವುಗಳಲ್ಲಿಯೂ ಋಷಿಗಳು ರಚಿಸಿ ಅಥವಾ ಸಂಗ್ರಹಿಸಿಕೊಟ್ಟ ಸಹಸ್ರನಾಮಾವಳಿ ಅಷ್ಟೋತ್ತರಶತನಾಮಾವಳಿ ಮುಂತಾದವುಗಳು ಶಕ್ತಿ ಸೌಂದರ್ಯಗಳಿಂದ ಅತ್ಯಂತ ಸನ್ಮಾನ್ಯವಾಗಿವೆಯೆಂಬುದರಲ್ಲಿ ಸಂಶಯವಿಲ್ಲ. ಬಿಡಿಬಿಡಿಯಾದ ಪುಷ್ಪ ಪತ್ರಗಳಿಂದಲೂ ದೇವರ ಪೂಜೆಯನ್ನು ಮಾಡಬಹುದು. ಆದರೆ ಅವುಗಳಲ್ಲಿ ಉತ್ತಮವಾದ ಪುಷ್ಪ ಪತ್ರಗಳನ್ನು ಆರಿಸಿಕೊಂಡು ಸರಿಯಾದ ಸ್ಥಾನದಲ್ಲಿ ಅವುಗಳನ್ನು ಜೋಡಿಸಿ ಹೆಣೆದು ವನಮಾಲೆಯನ್ನಾಗಿಸಿ ದೇವರಿಗೆ ಅರ್ಪಿಸಿದರೆ ಅದಕ್ಕೆ ವಿಶೇಷವಾದ ಕಾಂತಿ, ಶಕ್ತಿ, ಸೌರಭಗಳು ತುಂಬಿ ಬರುತ್ತವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲವೆ ! ಪ್ರಕೃತದಲ್ಲಿ ಅಂತಹ ದಿವ್ಯನಾಮ ಪುಷ್ಪಪತ್ರಗಳನ್ನು ಯೋಗದಿಂದ ಹೆಣೆದು ವೈಜಯನ್ತೀವನಮಾಲೆಯನ್ನು ಮಹಾವಿಷ್ಣುವಿಗೆ ಅರ್ಪಿಸಲಾಗಿದೆ. ಅದನ್ನು ಹೆಣೆದ ಮಾಲಾಕಾರರು ವಿಷ್ಣುವಿನ ಅವತಾರವೇ ಆಗಿರುವ ಮುನಿ ಮೂರ್ಧನ್ಯ ವೇದವ್ಯಾಸರು. ಅದನ್ನು ಉಪದೇಶಮಾಡಿದವರು ಭಗವದನುಗ್ರಹದಿಂದ ಸರ್ವಜ್ಞ ಕಲ್ಪರಾಗಿದ್ದ ಭಕ್ತಶಿರೋಮಣಿ ಭೀಷ್ಮಾಚಾರ್ಯರು. ಪ್ರಶ್ನೆ ಮಾಡಿ ಅವರನ್ನು ಈ ಸ್ತೋತ್ರಾಮೃತವು ಸೂಸುವಂತೆ ಮಾಡಿದವನು ಧರ್ಮ ಮೂರ್ತಿಯಾದ ಧರ್ಮರಾಜ. ಇವೆಲ್ಲಾ ನಡೆದದ್ದು ದೇವತೆಗಳು ಋಷಿಗಳು ಭಕ್ತರು ಜ್ಞಾನಿಗಳು ತುಂಬಿದ್ದ ಸಭೆಯಲ್ಲಿ, ಸಭೆಯ ಅಧ್ಯಕ್ಷನಾದರೋ ನಿಖಿಲ ಜಗತ್ತಿಗೆ ಅಧ್ಯಕ್ಷನಾಗಿ ಸ್ತೋತ್ರದ ಪ್ರತಿಪಾದ್ಯ ವಿಷಯವೇ ಆಗಿದ್ದ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ. ಇವುಗಳಲ್ಲಿ ಒಂದೊಂದೂ ಅತ್ಯಂತ ಉತ್ಕರ್ಷಕ್ಕೆ ಕಾರಣವಾದುದು. ಅವೆಲ್ಲದರ ಸೇರುವೆಯಿಂದಾಗಿರುವ ಸಹಸ್ರನಾಮ ರಸಾಯನದ ಮಹಿಮೆಯ ಬಗೆಗೆ ಬೇರೇನು ಹೇಳಬೇಕು ! ಶ್ರೀ ಮದ್ರಾಮಾಯಣದ ವಾಚನವು ಅದಕ್ಕೆ ಪ್ರತಿಪಾದ್ಯ ವಿಷಯವಾಗಿರುವ ಶ್ರೀರಾಮದೇವರ ಅಧ್ಯಕ್ಷತೆಯಲ್ಲಿಯೇ ಸಂಪನ್ನವಾಗಿ ಆತನ ಅಭಿನಂದನೆಗೆ ಪಾತ್ರವಾದಂತೆ, ಶ್ರೀ ಸಹಸ್ರನಾಮ ಪ್ರಬಂಧದ ಉಪದೇಶವೂ ಅದರ ಪ್ರತಿಪಾದ್ಯದೇವತೆಯಾಗಿರುವ ಶ್ರೀಕೃಷ್ಣನ ಅಧ್ಯಕ್ಷತೆಯಲ್ಲಿಯೇ ಸಂಪನ್ನವಾಗಿ ಆತನ ಅಭಿನಂದನೆಗೆ ಪಾತ್ರವಾದುದು ಸ್ಮರಣೀಯವಾದ ವಿಷಯ.

ವಿಷ್ಣು ಸಹಸ್ರನಾಮ, ಶಿವಸಹಸ್ರನಾಮ, ರಾಮಸಹಸ್ರನಾಮ ಮುಂತಾದ ಋಷಿಪ್ರೋಕ್ತವಾದ ಎಲ್ಲ ಸಹಸ್ರನಾಮಗಳೂ ಭಗವನ್ತನ ಆಯಾ ದೇವತಾ ರೂಪದ ಪ್ರಸನ್ನತೆಯನ್ನು ಸಂಪಾದಿಸಲು ಸಹಾಯಕವಾಗಿವೆ. "ವ್ರತಾನಾಂ ಉತ್ತಮಂ ವ್ರತಂ" ಎಂಬಂತೆ ಪ್ರತಿಯೊಂದು ಸಹಸ್ರನಾಮವೂ ತನ್ನ ಫಲಶ್ರುತಿಯಲ್ಲಿ ತಾನೇ ಸರ್ವಶ್ರೇಷ್ಠವೆಂದು ಘೋಷಣೆಮಾಡಿಕೊಳ್ಳುತ್ತದೆ.

ಹೀಗೆ ಎಲ್ಲ ಸಹಸ್ರನಾಮ ಸ್ತೋತ್ರಗಳೂ ಮಾನ್ಯವಾಗಿದ್ದರೂ ವೇದಾನ್ತ ದರ್ಶನದ ಎಲ್ಲ ಸಂಪ್ರದಾಯದ ಆಚಾರ್ಯರಿಂದಲೂ ಸಂಭಾವಿತವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಚೀನಕಾಲದಿಂದಲೂ ಹೆಚ್ಚು ಜನಪ್ರಿಯವಾಗಿ ಪ್ರಸಿದ್ಧವಾಗಿರುವುದು ಮಹಾಭಾರತದಲ್ಲಿ ಬರುವ **ಶ್ರೀಮದ್ ವಿಷ್ಣುಸಹಸ್ರನಾಮ ಸ್ತೋತ್ರಂ**.

ನಿರ್ವಿಶೇಷಾದ್ವೈತ ಸ್ಥಾಪಕರಾದ ಶ್ರೀ ಶಂಕರಭಗವತ್ಪಾದರು ಈ ಗ್ರಂಥಕ್ಕೆ ತಮ್ಮ ಅಮೂಲ್ಯವಾದ ಭಾಷ್ಯದ ಕಾಣಿಕೆಯನ್ನು ಸಮರ್ಪಿಸಿದ್ದಾರೆ. ಇದು ಅವರು ರಚಿಸಿದ ಮೊಟ್ಟಮೊದಲನೆಯ ಗ್ರಂಥ ಎಂಬುದಾಗಿ ಹೇಳುತ್ತಾರೆ. ತಾವು ಯಾವ ಗ್ರಂಥವನ್ನು ಮೊದಲು ರಚಿಸಬೇಕು ಎಂದು ಯೋಚಿಸುತ್ತಾ ಶ್ರೀಮದಾಚಾರ್ಯರು ತಮ್ಮ ಬೇರೆ ಬೇರೆ ಶಿಷ್ಯರನ್ನು ತಮ್ಮ ಗ್ರಂಥಭಂಡಾರದ ಬೇರೆ ಬೇರೆ ಕಡೆಗಳಿಗೆ ಕಳುಹಿಸಿ "ನೀವು ಕಣ್ಣುಮುಚ್ಚಿಕೊಂಡು ನಿಮ್ಮ ಕೈಗೆ ಸಿಕ್ಕುವ ಮೊದಲನೆಯ ಗ್ರಂಥವನ್ನು ತೆಗೆದುಕೊಂಡು ಬನ್ನಿ" ಎಂದು ಆಜ್ಞೆ ಮಾಡಿದರು. ಆಗ ಅವರೆಲ್ಲರ ಕೈಗಳಿಗೂ ವಿಷ್ಣುಸಹಸ್ರನಾಮದ ಬೇರೆ ಬೇರೆ ಪ್ರತಿಗಳೇ ಸಿಕ್ಕಿದುವು. ಆಗ ಭಗವತ್ಪಾದರು ಅದೇ ಭಗವಂತನ ಆದೇಶವೆಂದು ತಿಳಿದು ಆ ಗ್ರಂಥಕ್ಕೆ ಮೊಟ್ಟಮೊದಲು ಭಾಷ್ಯವನ್ನು ಮಂಡಿಸಿದರು - ಎಂಬ ಕಥೆಯನ್ನು ಕೇಳುತ್ತೇವೆ. ಅವರಿಗೆ ಈ ಗ್ರಂಥದ ವಿಷಯದಲ್ಲಿ ಅಸಾಧಾರಣವಾದ ಗೌರವವಿತ್ತು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ತಮ್ಮ **ಭಜಗೋವಿಂದ ಸ್ತೋತ್ರ**ದಲ್ಲಿ ಗಾನ ಮಾಡಲು ಅತ್ಯಂತ ಶ್ರೇಷ್ಠವಾದ ವಿಷಯವು ಯಾವುದು ಎಂದು ಪ್ರಶ್ನೆ ಮಾಡಿ ಅದಕ್ಕೆ ಭಗವದ್ಗೀತೆ ಮತ್ತು ಸಹಸ್ರನಾಮವೇ ಅತ್ಯಂತ ಗೇಯವಾದುದು ಎಂಬ ಉತ್ತರವನ್ನು ಮಂಡಿಸುತ್ತಾರೆ. **"ಗೇಯಂ ಗೀತಾ ನಾಮಸಹಸ್ರಂ"**.

೨. ಸವಿಶೇಷಾದ್ವೈತ ಸ್ಥಾಪಕರಾದ ಭಗವದ್ರಾಮಾನುಜರ ಎಲ್ಲ ಗ್ರಂಥಗಳೂ ಶ್ರೀವಿಷ್ಣುಸಹಸ್ರನಾಮದ ಅನುಸಂಧಾನದಿಂದ ಪ್ರಭಾವಿತವಾಗಿವೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅದಕ್ಕೆ ಅವರು ತಮ್ಮ ಪ್ರಶಿಷ್ಯರಾದ ಪರಾಶರಭಟ್ಟರ ಮೂಲಕ ಭಾಷ್ಯವನ್ನು ಬರೆಯಿಸಿ ಸಂಭಾವನೆಯನ್ನು ಮಾಡಿದ್ದಾರೆ. **"ಭಗವದ್ಗುಣ ದರ್ಪಣ"** ಎಂಬ ತಮ್ಮ ಸಹಸ್ರನಾಮ ಭಾಷ್ಯದಲ್ಲಿ ಶ್ರೀಪ[illegible] ಸಹಸ್ರನಾಮ [illegible]ಮೆಯನ್ನು ಕುರಿತು

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೇಕ ಶಾಸ್ತ್ರ ಮತ್ತು ಉಪಪತ್ತಿಗಳಿಂದ ಕೂಡಿದ ವಿಸ್ತಾರವಾದ ಲೇಖನವನ್ನು ಮಂಡಿಸಿದ್ದಾರೆ.

"ಇದು ಮಹಾಭಾರತದ ಸಾರ ; ಮಹರ್ಷಿಗಳಿಂದ ಪ್ರಶಂಸೆ ಮಾಡಲ್ಪಟ್ಟಿದ್ದು ; ವೇದಾಚಾರ್ಯರಾದ ವೇದವ್ಯಾಸನಾರಾಯಣರಿಂದ ಉಪದೇಶ ಮಾಡಲ್ಪಟ್ಟಿದ್ದು ; ಮಹಾಯೋಗೀಶ್ವರರಾದ ಭೀಷ್ಮಾಚಾರ್ಯರಿಗೆ ಅತ್ಯಂತ ಶ್ರೇಷ್ಠವೆಂದು ಅಭಿಮತವಾದದ್ದು ; ಅತ್ಯಂತ ಅತಿಶಯವಾದ ಪರಿಗ್ರಹವುಳ್ಳದ್ದು ; ಗೀತಾ, ನಾರಾಯಣೀಯ ಮುಂತಾದವುಗಳೊಡನೆ ಸಮಾನಾರ್ಥಕವಾದದ್ದು" ಎಂದು ಅದರ ಶ್ರೇಷ್ಠತೆಗೆ ಆರು ಕಾರಣಗಳನ್ನು ಸಂಗ್ರಹಿಸಿ ಅದನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

"ಮಹಾಭಾರತ ಸಾರತ್ವಾತ್ ಋಷಿಭಿಃ ಪರಿಗಾನತಃ ।
ವೇದಾಚಾರ್ಯಸಮಾಹಾರಾತ್ ಭೀಷ್ಮೋತ್ಕೃಷ್ಟಮತತ್ವತಃ ॥
ಪರಿಗ್ರಹಾತಿಶಯತಃ ಗೀತಾದ್ಯೈಕಾರ್ಥತಶ್ಚ ಸಃ ।
ಸಹಸ್ರನಾಮ್ನಾಂ ಅಧ್ಯಾಯಃ ಉಪಾದೇಯತಮೋ ಮತಃ ॥"

ಮಹಾಪಾತಕಗಳ ಪ್ರಾಯಶ್ಚಿತ್ತಕ್ಕೆ, ಐಹಿಕ - ಆಮುಷ್ಮಿಕ ಪುರುಷಾರ್ಥಗಳ ಸಾಧನೆಗೆ, ಸಂಸಾರದ ಗಂಟನ್ನು ಕತ್ತರಿಸಿ ಹಾಕುವುದಕ್ಕೆ, ಪರಮಪದವನ್ನು ಹೊಂದುವುದಕ್ಕೆ, ಅನುಸಂಧಾನ ಸಮಯದಲ್ಲೂ ಕೂಡ ಭಗವಂತನ ಗುಣಾಮೃತವನ್ನು ಅನುಭವಿಸುವುದಕ್ಕೆ ಸಹಸ್ರನಾಮಕ್ಕೆ ಸಾಟಿಯಾದ ಸಾಧನವು ಬೇರೊಂದಿಲ್ಲ" ಎಂದೂ ಅವರು ಘೋಷಣೆ ಮಾಡುತ್ತಾರೆ.

೩. ದ್ವೈತ ಮತ ಸ್ಥಾಪಕಾಚಾರ್ಯರಾದ ಶ್ರೀಮನ್ಮಧ್ವಾಚಾರ್ಯರು ತಮ್ಮ "ಗೀತಾ ತಾತ್ಪರ್ಯ ನಿರ್ಣಯದಲ್ಲಿ" - "ಶಾಸ್ತ್ರದಲ್ಲಿ ಸಾರವಾದದ್ದು ಭಾರತ ; ಅದರಲ್ಲಿಯೂ ಸಾರತರವಾದದ್ದು ವಿಷ್ಣುಸಹಸ್ರನಾಮ ಮತ್ತು ಶ್ರೀಕೃಷ್ಣಗೀತೆ. ಇವುಗಳ ಜ್ಞಾನದಿಂದ ಶೀಘ್ರದಲ್ಲಿಯೇ ಮುಕ್ತಿಯು ದೊರೆಯುತ್ತದೆ" ಎಂದು ಸಾರಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಶಾಸ್ತ್ರೇಷು ಭಾರತಂ ಸಾರಂ ತತ್ರ ನಾಮ ಸಹಸ್ರಕಂ ।
ವೈಷ್ಣವಂ ಕೃಷ್ಣಗೀತಾ ಚ ತಜ್ಞಾನಾನ್ಮುಚ್ಯತೇಽಂಜಸಾ ॥"

೪. ಮಹಾರಾಷ್ಟ್ರದ ಸಂತ ಶ್ರೀತುಕಾರಾಮರು ಶ್ರೀ ವಿಷ್ಣುಸಹಸ್ರನಾಮದ ಸಾವಿರ ನಾಮಗಳೂ ಸಾವಿರ ಶಾಸ್ತ್ರಗಳಾಗಿವೆ ಎಂದು ಸಾರಿದ್ದಾರೆ. ಇದಲ್ಲದೆ ತಮ್ಮ ಮಗಳ ಮದುವೆಯಲ್ಲಿ ಅವರು ಅಳಿಯನಿಗೆ ಕೊಟ್ಟ ಉಡುಗೊರೆ ಶ್ರೀವಿಷ್ಣುಸಹಸ್ರನಾಮದ ಒಂದು ಪ್ರತಿ - ಎಂದು ನಾವು ಕೇಳುತ್ತೇವೆ.

೫. ಹೀಗೆ ನಾನಾ ಆಚಾರ್ಯರು ಮತ್ತು ಸಾಧುಸಂತರು ಪ್ರಶಂಸೆಯ ಮಳೆಗಳನ್ನೇ ಇದರ ಮೇಲೆ ಸುರಿಸಿದ್ದಾರೆ. ಇದು ಸ್ತೋತ್ರವಾಗಿದ್ದರೂ ಮಹಾ ಮಂತ್ರವಾಗಿಯೂ ಮಾನ್ಯ ಮಾಡಲ್ಪಟ್ಟು ಹದಿನೈದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಭಾಷ್ಯಗಳಿಂದ ಅಲಂಕೃತವಾಗಿದೆ. ಸಾಕ್ಷಾತ್ ಪರಮಾತ್ಮನನ್ನೇ "ಸಾವಿರ ನಾಮಗಳ ಸ್ವಾಮಿ", "ದೇವೋ ನಾಮ ಸಹಸ್ರವಾನ್", "ಸಾಸಿರ ನಾಮದ ಶ್ರೀನಿವಾಸ", "ನಾಮಮಾಯಿರಂ ಏತ್ತಿ ನಿನ್ನ ನಾರಾಯಣಾ ನರನೇ" ಎಂದು ಅತಿಶಯದಿಂದ ಕೊಂಡಾಡುತ್ತಾರೆ.

ಭಾರತದ ಐದು ಮಹಾರತ್ನಗಳಲ್ಲಿ ಈ ಸಹಸ್ರನಾಮವೂ ಸೇರಿದೆ ಎಂದು ವಿಷ್ಣುಧರ್ಮೋತ್ತರವು ಹೇಳುತ್ತದೆ.

ಗೀತಾ ಸಹಸ್ರನಾಮೈವ ಸ್ತವರಾಜೋ ಹ್ಯನುಸ್ಮೃತಿಃ ।
ಗಜೇಂದ್ರ ಮೋಕ್ಷಣಂ ಚೈವ ಪಂಚರತ್ನಾನಿ ಭಾರತೇ ॥

ಭಗವದ್ಗೀತೆಯ ಸಮಕಕ್ಷೆಯಲ್ಲಿ ಮೋಕ್ಷಶಾಸ್ತ್ರವೆಂದು ಪರಿಗಣಿಸಲ್ಪಟ್ಟಿರುವ ದಿವ್ಯಗ್ರಂಥ ವಿಷ್ಣುಸಹಸ್ರನಾಮಸ್ತೋತ್ರ.

ಇದು ಮೋಕ್ಷ ಶಾಸ್ತ್ರವಾಗಿರುವುದು ಮಾತ್ರವಲ್ಲದೆ ಮಹಾರೋಗ ನಿವಾರಕವಾದ ಮಹಾಮಂತ್ರವೂ ಆಗಿದೆ ಎಂದು ಪ್ರಾಚೀನರಾದ ಆಯುರ್ವೇದಾಚಾರ್ಯರು ಘೋಷಣೆ ಮಾಡಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ವಿಷ್ಣುಂ ಸಹಸ್ರಮೂರ್ಧಾನಂ ಚರಾಚರಪತಿಂ ವಿಭುಂ ।
ಸ್ತುವನ್ನಾಮಸಹಸ್ರೇಣ ಜ್ವರಾನ್ ಸರ್ವಾನ್ ವ್ಯಪೋಹತಿ ॥"

(ಚರಕ ಸಂಹಿತಾ)

ಮೋಹರೋಗದ ಚಿಕಿತ್ಸೆಯಲ್ಲಿ ಪುರುಷಸೂಕ್ತದ ಜಪದಂತೆ ಈ ಸಹಸ್ರನಾಮದ ಜಪವನ್ನೂ ಮಾಡಲು ಸಲಹೆಯನ್ನು ನೀಡಿದೆ. ಕ್ಷಯರೋಗದ ನಿವಾರಣೆಗೂ, ಗ್ರಹಚಿಕಿತ್ಸೆಗೂ ಇದರ ಅನುಸಂಧಾನವನ್ನು ಹೇಳಿದೆ.

"ಜಪ್ಯಂ ಪುರುಷಸೂಕ್ತಂ ಚ ತಥೈವ ಭಗವನ್ನಾಮಸಹಸ್ರಂ ಭಾರತೋದಿತಂ ।
ಆಸತ್ಮತಂ ಮರುತ್ಸೂಕ್ತಂ ವಿಷ್ಣೋರ್ನಾಮ ಸಹಸ್ರಕಂ ॥"

"ರೋಗದ ಸರಿಯಾದ ಕಾರಣ ಗುರುತಿಸಿ ಸರಿಯಾದ ಔಷಧಿಯನ್ನೂ ಸೇವಿಸಿ ಪಥ್ಯವೇ ಮುಂತಾದ ನಿಯಮಗಳನ್ನು ಪಾಲಿಸಿದರೆ ರೋಗಪರಿಹಾರ ವಾಗುವುದು ನಾವು ನೋಡುತ್ತೇವೆ. ಇದರಲ್ಲಿ ವಿಷ್ಣು ಸಹಸ್ರನಾಮದ ಪಾತ್ರ ವೇನು ? ಎಂದು ಒಬ್ಬರು ಶಿಷ್ಯರು ಪ್ರಶ್ನೆಯನ್ನು ಕೇಳಿದರು. ಅದಕ್ಕೆ ಮಹಾ ಯೋಗಿವರ್ಯರಾದ ಶ್ರೀರಂಗ ಮಹಾಗುರುಗಳು "ಭೌತಿಕವಾದ ಔಷಧಿಗಳಿಂದ ರೋಗದ ಆಧಿಭೌತಿಕ ಭಾಗವು ನಿವಾರಣೆ ಹೊಂದಬಹುದು. ಆದರೆ ಭಗವ ನ್ನಾಮದ ಅನುಸಂಧಾನದಿಂದ ಆಧಿದೈವಿಕ ಮತ್ತು ಆಧ್ಯಾತ್ಮಿಕವಾದ ರೋಗ ಭಾಗಗಳೂ ನಿವೃತ್ತಿ ಹೊಂದಿ ರೋಗವು ನಿರ್ಮೂಲವಾಗುತ್ತದೆ". ಎಂದು ಉತ್ತರವನ್ನು ಅನುಗ್ರಹಿಸಿದ್ದರು.

ರೋಗ ನಿವಾರಣೆಗಾಗಿ ಈ ಸಹಸ್ರನಾಮ ಪಾರಾಯಣವನ್ನು ಮಾಡುವ ಸಂಪ್ರದಾಯವು ಹಿಂದಿನಿಂದಲೂ ಇದೆ. ಬಾಣಭಟ್ಟನ ಕಾದಂಬರಿಯಲ್ಲಿ ಸೂತಿಕಾಗೃಹವನ್ನು ವರ್ಣನೆ ಮಾಡುವಾಗ "ಅಲ್ಲಿ ವಿಷ್ಣು ಸಹಸ್ರನಾಮವು ನಿರನ್ತರವಾಗಿ ಪಾರಾಯಣ ಮಾಡಲ್ಪಡುತ್ತಿತ್ತು" ಎಂಬ ಹೇಳಿಕೆಯನ್ನು ನೋಡುತ್ತೇವೆ.

"ಅವಿಚ್ಛಿನ್ನ ಪಠ್ಯಮಾನ ನಾರಾಯಣ ನಾಮ ಸಹಸ್ರಕಂ"

Sri Vidyabharathi Book Centre, Sringeri

CC-O. In Public Domain. Digitized by eGangotri

ಉಳಿದ ಯಜ್ಞಗಳನ್ನು ಆಚರಿಸಬೇಕಾದರೆ ಅದಕ್ಕೆ ಸರ್ವರಿಗೂ ಅಧಿಕಾರ ವಿಲ್ಲ. ದೇಶಕಾಲಾದ್ರವ್ಯಾದಿಗಳ ವ್ಯವಸ್ಥೆಯುಂಟು. ಹಿಂಸಾದಿ ದೋಷಗಳ ಸಂಭಾವನೆ ಉಂಟು. ಅದರ ಆಚರಣೆಗೆ ಹೇರಳವಾದ ಧನ-ಜನ-ಋತ್ವಿಕ್ ಪುರೋಹಿತಾದಿಗಳ ಆವಶ್ಯಕತೆಯುಂಟು. ಆಚರಣೆಯಲ್ಲಿ ಹೆಚ್ಚು ಕಡಿಮೆ ಯಾದರೆ ಅನರ್ಥವುಂಟಾಗುವುದೂ ಉಂಟು. ಇಷ್ಟಲ್ಲದೆ ಒಂದೊಂದು ಯಜ್ಞ ವನ್ನು ಅಚರಿಸಿದರೆ ನಿರ್ದಿಷ್ಟವಾದ ಫಲ ಮಾತ್ರವುಂಟು. ಆದರೆ ಈ ವಿಷ್ಣು ಸಹಸ್ರನಾಮವೆಂಬ ಜಪ ಯಜ್ಞದಲ್ಲಿ ಆ ಯಾವ ಸಂಪತ್ತಿನ ಆವಶ್ಯಕತೆಯೂ ಇಲ್ಲ. ಅತಿ ಸುಲಭವಾಗಿ ಆಚರಿಸಬಹುದು. ಎಲ್ಲ ಪುರುಷಾರ್ಥಗಳನ್ನೂ ಕೊಡುವ ಶಕ್ತಿಯುಳ್ಳ ಮಹಾಯಜ್ಞವಿದು.

"ಯಜ್ಞಾನಾಂ ಜಪಯಜ್ಞೋಽಸ್ಮಿ" ಎಂದು ಶ್ರೀಕೃಷ್ಣಪರಮಾತ್ಮನು ಅಪ್ಪಣೆಕೊಡಿಸಿರುವಂತೆ, ಉಳಿದ ಯಜ್ಞಗಳಿಗಿಂತಲೂ ಜಪಯಜ್ಞ ತುಂಬ ಸುಲಭತಮವಾದುದು. ಅದರಲ್ಲೂ ಜಪ್ಯತಮವಾದುದು ಶ್ರೀವಿಷ್ಣು ಸಹಸ್ರನಾಮ ಸ್ತೋತ್ರ. ಎಲ್ಲ ವರ್ಣ ಎಲ್ಲ ಆಶ್ರಮದವರಿಗೂ ಫಲಪ್ರದವಾದ ಸ್ತೋತ್ರರಾಜ - ಮಂತ್ರರಾಜ ಇದು. ಶ್ರೀಶಂಕರಭಗವತ್ಪಾದರು ತಮ್ಮ ಭಾಷ್ಯದ ಅವತರಣಿಕೆಯಲ್ಲಿ ಅಪ್ಪಣೆಕೊಡಿಸಿರುವಂತೆ ಇದರ ಹಿರಿಮೆಗೆ ಕಾರಣ ವನ್ನು ಹೀಗೆ ಸಂಗ್ರಹಿಸಬಹುದು.

"ಸಕಲಪುರುಷಾರ್ಥಸಾಧನಂ, ಸುಖಸಂಪಾದ್ಯಂ,
ಅಲ್ಪಪ್ರಯಾಸಂ, ಅನಲ್ಪಫಲಂ, ಹಿಂಸಾದಿರಹಿತಂ,
ಪುರುಷಾನ್ತರದ್ರವ್ಯಾನ್ತರದೇಶಕಾಲಾದಿ
ನಿಯಮಾನಪೇಕ್ಷತ್ವಂ ಚ ಆಧಿಕ್ಯೇ ಕಾರಣಂ"

ಈ ವಿಷ್ಣುಸಹಸ್ರನಾಮದಲ್ಲಿ ಕೇವಲ ಪಾದಪೂರಣಕ್ಕಾಗಿ ಸೇರಿಸಲ್ಪಟ್ಟಿ ರುವ "ಏವ, ಚ" ಇತ್ಯಾದಿ ನಿರರ್ಥಕವಾದ ಅವ್ಯಯಗಳಿವೆ. ಒಂದೇ ಪದವನ್ನೇ ಮತ್ತೆ ಮತ್ತೆ ಹೇಳುವ ದ್ವಿರುಕ್ತಿ, ತ್ರಿರುಕ್ತಿ ಮುಂತಾದ ಪುನರುಕ್ತಿ ದೋಷಗಳಿವೆ - ಎಂದು ಭಾಸ್ಕರರಾಯ[illegible]ರೆ.

Sri Vidyabharathi Book Centre Sringeri

CC-O. In Public Domain. Digitized by eGangotri

ಈ ಆರೋಪಣೆಯಲ್ಲಿ ಆಳವಾದ ವಿಚಾರವಿಲ್ಲ. ಏಕೆಂದರೆ ವಿಷ್ಣುಸಹಸ್ರ ನಾಮ ಒಂದು ಮಹಾಮಂತ್ರ. ಸಾಹಿತ್ಯಶಾಸ್ತ್ರಕ್ಕೆ ಅನುಗುಣವಾದ ಗುಣದೋಷ ವಿಮರ್ಶೆಯು ಮಂತ್ರಗಳಿಗೆ ಸಲ್ಲುವುದಿಲ್ಲ. ''ಏವ, ಚ'' ಮುಂತಾದ ಅವ್ಯಯ ಗಳು ಅನೇಕ ಕಡೆಗಳಲ್ಲಿದ್ದರೂ ಅವು ನಿರರ್ಥಕಗಳಲ್ಲ. ಆಯಾ ಸಂದರ್ಭಗಳಲ್ಲಿ ಅರ್ಥವೈಶದ್ಯಕ್ಕೆ ಸಹಾಯಕವಾಗಿವೆ. ಇನ್ನು ಪುನರುಕ್ತಿಯ ವಿಷಯ. ಅರ್ಥ ಪುನರುಕ್ತಿಯು ದೋಷವೇ ಹೊರತು ಕೇವಲ ಶಬ್ದ ಪುನರುಕ್ತಿಯು ದೋಷವಾಗು ವುದಿಲ್ಲ. ಶ್ರೀವಿಷ್ಣುಸಹಸ್ರನಾಮ ಸ್ತೋತ್ರದಲ್ಲಿ ಕಂಡುಬರುವ ಪುನರುಕ್ತ ಶಬ್ದ ಗಳಿಗೆ ಆಯಾ ಸಂದರ್ಭಗಳಿಗೆ ತಕ್ಕಂತೆ ಬೇರೆ ಬೇರೆ ಅರ್ಥಗಳಾಗುತ್ತವೆ - ಎಂಬುದನ್ನು ಭಾಷ್ಯಕಾರರು ತೋರಿಸಿಕೊಟ್ಟಿದ್ದಾರೆ. ಅನೇಕ ಕಡೆಗಳಲ್ಲಿ ಅಭಿಪ್ರಾಯಗಳ ಪುನರುಕ್ತಿಯೂ ದೋಷವಾಗುವುದಿಲ್ಲ. ಪುನರುಕ್ತಿಯಿಂದ ವಿಷಯವು ದೃಢಪಡುತ್ತದೆ. ಮಂತ್ರಶಾಸ್ತ್ರದಲ್ಲಿ ನಿಯತವಾದ ಕೆಲವು ಶಬ್ದ ಗಳನ್ನು ಬೇರೆ ಬೇರೆ ಕಡೆಗಳಲ್ಲಿ ಅಥವಾ ಒಂದೇ ಕಡೆಗಳಲ್ಲಿ ಪುನರುಕ್ತಿ ಮಾಡುವುದರಿಂದ ವಿಶೇಷವಾದ ಶಕ್ತಿಯುಂಟಾಗುತ್ತದೆ ಎಂಬುದನ್ನು ಗಮನಿಸಬೇಕು.

ಕರೂರಿನ ಡಾ। ಕೆ. ಜನಾರ್ದನಾಚಾರ್ಯ ಎಂಬುವರು ಬರೆದಿರುವ **"A Dip into Vishnusahasranama"** ಎಂಬ ಗ್ರಂಥದಲ್ಲಿ ಮೇಲಿನ ಆಕ್ಷೇಪಣೆಗಳಿಗೆಲ್ಲಾ ತಕ್ಕ ಉತ್ತರವನ್ನು ಕೊಟ್ಟಿದೆ. ವಿದ್ವಾನ್ ಶ್ರೀಶೇಷಾಚಲ ಶರ್ಮರ ಲೇಖನದಲ್ಲಿಯೂ ಮೇಲ್ಕಂಡ ಆಕ್ಷೇಪಣೆಗೆ ಸಮರ್ಥವಾದ ಸಮಾಧಾನವನ್ನು ಸಂಕ್ಷೇಪವಾಗಿ ಹೇಳಿದೆ.

ಶ್ರೀ ವಿಷ್ಣುಸಹಸ್ರನಾಮವನ್ನು ಹೇಗೆ ಪಾರಾಯಣ ಮಾಡಬೇಕು ಎಂಬುದಕ್ಕೆ ''ಭಗವತ್ಪರಾಯಣರಾಗಿ ಪಾರಾಯಣ ಮಾಡಬೇಕು'' ಎಂಬ ಸಂಕ್ಷೇಪವಾದ ಉತ್ತರವನ್ನು ಶ್ರೀರಂಗ ಮಹಾಗುರುಗಳು ಅಪ್ಪಣೆ ಕೊಟ್ಟಿದ್ದರು. ಪರಮಾತ್ಮನಲ್ಲಿ ನಿಜವಾದ ಪಾರಾಯಣತೆ ಉಂಟಾದರೆ ಸರಿಯಾದ ಪಾರಾಯಣಕ್ರಮವೂ ಅದರೊಡನೆ ಹುಟ್ಟಿಕೊಳ್ಳುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮದ್ವಿಷ್ಣುಸಹಸ್ರನಾಮವು ಭಕ್ತಿರಸಾಯನ. ಭಕ್ತಿರಸದಿಂದ ಪರಿಪೂರ್ಣಹೃದಯವುಳ್ಳ ಭಕ್ತರು ಹೇಗೆ ಪಾರಾಯಣ ಮಾಡಿದರೂ ಅದು ಭಗವಂತನಿಗೆ ಪ್ರಿಯವಾಗುತ್ತದೆ. ಅಬದ್ಧವಾದ ಪಾಠವನ್ನು ಹೇಳಿದರೂ ಅದರಿಂದ ಪಾಪಪರಿಹಾರ ಉಂಟಾಗುತ್ತದೆ.

''ಸ ವಾಗ್ವಿಸರ್ಗೋ ಜನತಾಘವಿಪ್ಲವೋ ಯಸ್ಮಿನ್ ಪ್ರತಿಶ್ಲೋಕಂ ಅಬದ್ಧವತ್ಯಪಿ ಅತ್ಯಂತ ಭಕ್ತಿಯುಕ್ತಾನಾಂ ನ ವಿಧಿರ್ನೈವ ಚ ಕ್ರಮಃ'' ಇದು ಭಕ್ತಿಯ ಮಹಿಮೆ. ಆದರೆ ಭಕ್ತಿರಸದೊಡನೆ ವ್ಯಾಕರಣ ಶುದ್ಧವಾದ ಪಾಠ, ಸ್ವರಾದಿಶುದ್ಧಿ ಇವುಗಳೊಡನೆ ಪಾರಾಯಣವನ್ನೂ ಗಾನವನ್ನೂ ಮಾಡಿದರೆ ಅದು ಇನ್ನೂ ಹೆಚ್ಚು ವೀರ್ಯವತ್ತರವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಶ್ರೀವಿಷ್ಣುಸಹಸ್ರನಾಮದ ಪ್ರತಿಗಳನ್ನು ಹಲವಾರು ಸಂಸ್ಥೆಗಳು ಈಗಾಗಲೇ ಪ್ರಕಟನೆ ಮಾಡಿವೆ. ಶ್ರೀ ಗಂಗಾಧರಶಾಸ್ತ್ರಿಗಳ ಈ ಹೊಸ ಪುಸ್ತಕದಲ್ಲಿ ವಿಶೇಷವೇನೆಂದರೆ ಈ ಪ್ರಕೃತ ಪುಸ್ತಕದ ಹಿನ್ನೆಲೆಯಲ್ಲಿ ಶ್ರೇಷ್ಠಮಟ್ಟದ ವಿದ್ವಾಂಸರ ಲೇಖನಗಳು ಶೋಭಿಸುತ್ತಿವೆ. ಅವುಗಳ ಅನುಸಂಧಾನದಿಂದ ಸಹಸ್ರನಾಮದ ಪಾರಾಯಣಕ್ಕೆ ವಿಶೇಷವಾದ ಲಾಭವುಂಟಾಗುತ್ತದೆ. ಇದಲ್ಲದೆ ಗ್ರಂಥವು ದಪ್ಪ ಅಕ್ಷರಗಳಲ್ಲಿ ಸ್ಫುಟವಾಗಿ ಮುದ್ರಿತವಾಗಿರುವದರಿಂದ ಆಯಾಸವಿಲ್ಲದೆ ಗ್ರಂಥವನ್ನು ಪಾರಾಯಣ ಮಾಡುವುದಕ್ಕೆ ಸಹಾಯವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಶ್ರೀಗಂಗಾಧರಶಾಸ್ತ್ರಿಗಳ ಸದ್ಗ್ರಂಥವು ಬಹುಮಂದಿಯ ಕೈಸೇರಿ ಅವರ ಪುರುಷಾರ್ಥ ಸಾಧನೆಗೆ ಸಹಾಯಕವಾಗಲಿ. ಶ್ರೀ ಶಾಸ್ತ್ರಿಗಳಿಂದ ಇನ್ನೂ ಅನೇಕ ಸದ್ಗ್ರಂಥಗಳು ಪ್ರಕಾಶಿತವಾಗಲಿ ಎಂದು ಪ್ರಕಾಶಸ್ವರೂಪನಾದ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಅಷ್ಟಾಂಗಯೋಗ
ವಿಜ್ಞಾನಮಂದಿರಂ,
ಬೆಂಗಳೂರು.

ಇತಿ ನಾರಾಯಣ ಸ್ಮರಣೆಗಳು
ಶ್ರೀ ಶ್ರೀ ರಂಗಪ್ರಿಯ ಶ್ರೀಪಾದ ಶ್ರೀ ಶ್ರೀಃ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಾನುಕ್ರಮಣಿಕೆ

ವಿಷ್ಣುಸಹಸ್ರನಾಮಸ್ತೋತ್ರಮ್ 1

ನಾಮಜಪದ ವೈಶಿಷ್ಟ್ಯ
- *ವಿದ್ವಾನ್ ಎನ್. ರಂಗನಾಥಶರ್ಮಾ* 20

The Glory of Vishnu Sahasranama
- *Dr. P.S. Narayana Rao* 29

श्री विष्णुसहस्रनाम की महिमा
- *प्रो. एस्. श्रीकण्ठमूर्ति* 33

ಶ್ರೀ ವಿಷ್ಣುಸಹಸ್ರನಾಮದ ಮಹಿಮೆ
- *ಡಾ।। ಎನ್. ಎಸ್. ಅನಂತರಂಗಾಚಾರ್ಯ* 40

शान्तिः कलौ ह्यघौघस्य नामसङ्कीर्तनं हरेः
- *विद्वान् शेषाचलशर्मा* 49

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಹರಿಃ ಓಂ ॥

ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್

ಓಂ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃ ಪೌತ್ರಮಕಲ್ಮಷಮ್ ।
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಮ್ ॥

ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥

ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।
ಸದೈಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ ॥

ಯಸ್ಯ ಸ್ಮರಣಮಾತ್ರೇಣ ಜನ್ಮಸಂಸಾರಬಂಧನಾತ್ ।
ವಿಮುಚ್ಯತೇ ನಮಸ್ತಸ್ಮೈ ವಿಷ್ಣವೇ ಪ್ರಭವಿಷ್ಣವೇ ॥

ನಮಃ ಸಮಸ್ತಭೂತಾನಾಮಾದಿಭೂತಾಯ ಭೂಭೃತೇ ।
ಅನೇಕರೂಪರೂಪಾಯ ವಿಷ್ಣವೇ ಪ್ರಭವಿಷ್ಣವೇ ॥

ಓಂ ನಮೋ ವಿಷ್ಣವೇ ಪ್ರಭವಿಷ್ಣವೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವೈಶಂಪಾಯನ ಉವಾಚ -

ಶ್ರುತ್ವಾ ಧರ್ಮಾನಶೇಷೇಣ ಪಾವನಾನಿ ಚ ಸರ್ವಶಃ ।
ಯುಧಿಷ್ಠಿರಃ ಶಾಂತನವಂ ಪುನರೇವಾಭ್ಯಭಾಷತ ॥೧॥

ಯುಧಿಷ್ಠಿರ ಉವಾಚ -

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥೨॥
ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ ।
ಕಿಂ ಜಪನ್ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ॥೩॥

ಶ್ರೀ ಭೀಷ್ಮ ಉವಾಚ -

ಜಗತ್ಪ್ರಭುಂ ದೇವದೇವಮನಂತಂ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ ॥೪॥
ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।
ಧ್ಯಾಯಂಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ಚ ॥೫॥
ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥೬॥
ಬ್ರಹ್ಮಣ್ಯಂ ಸರ್ವಧರ್ಮಜ್ಞಂ ಲೋಕಾನಾಂ ಕೀರ್ತಿವರ್ಧನಮ್ ।
ಲೋಕನಾಥಂ ಮಹದ್ಭೂತಂ ಸರ್ವಭೂತಭವೋದ್ಭವಮ್ ॥೭॥
ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥೮॥
ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಮ್ ॥೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪವಿತ್ರಾಣಾಂ ಪವಿತ್ರಂ ಯೋ ಮಙ್ಗಲಾನಾಂ ಚ ಮಙ್ಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥೧೦॥

ಯತಃ ಸರ್ವಾಣಿ ಭೂತಾನಿ ಭವಂತ್ಯಾದಿಯುಗಾಗಮೇ ।
ಯಸ್ಮಿಂಶ್ಚ ಪ್ರಲಯಂ ಯಾಂತಿ ಪುನರೇವ ಯುಗಕ್ಷಯೇ ॥೧೧॥

ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।
ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್ ॥೧೨॥

ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।
ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥೧೩॥

ಋಷಿರ್ನಾಮ್ನಾಂ ಸಹಸ್ರಸ್ಯ ವೇದವ್ಯಾಸೋ ಮಹಾಮುನಿಃ ।
ಛಂದೋಽನುಷ್ಟುಪ್ ತಥಾ ದೇವೋ ಭಗವಾನ್ ದೇವಕೀಸುತಃ ॥೧೪॥

ಅಮೃತಾಂಶೂದ್ಭವೋ ಬೀಜಂ ಶಕ್ತಿರ್ದೇವಕಿನಂದನಃ ।
ತ್ರಿಸಾಮಾ ಹೃದಯಂ ತಸ್ಯ ಶಾಂತ್ಯರ್ಥೇ ವಿನಿಯುಜ್ಯತೇ ॥೧೫॥

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಪ್ರಭವಿಷ್ಣುಂ ಮಹೇಶ್ವರಮ್ ।
ಅನೇಕರೂಪದೈತ್ಯಾಂತಂ ನಮಾಮಿ ಪುರುಷೋತ್ತಮಮ್ ॥೧೬॥

ಅಸ್ಯ ಶ್ರೀವಿಷ್ಣೋರ್ದಿವ್ಯಸಹಸ್ರನಾಮಸ್ತೋತ್ರಮಹಾಮಂತ್ರಸ್ಯ । ಶ್ರೀವೇದವ್ಯಾಸೋ ಭಗವಾನ್ ಋಷಿಃ । ಅನುಷ್ಟುಪ್ ಛಂದಃ । ಶ್ರೀ ಮಹಾವಿಷ್ಣುಃ ಪರಮಾತ್ಮಾ ಶ್ರೀಮನ್ನಾರಾಯಣೋ ದೇವತಾ । ಅಮೃತಾಂಶೂದ್ಭವೋ ಭಾನುರಿತಿ ಬೀಜಮ್ । ದೇವಕೀನಂದನಃ ಸ್ರಷ್ಟೇತಿ ಶಕ್ತಿಃ । ಉದ್ಭವಃ ಕ್ಷೋಭಣೋ ದೇವ ಇತಿ ಪರಮೋ ಮಂತ್ರಃ । ಶಂಖಭೃನ್ನಂದಕೀ ಚಕ್ರೀತಿ ಕೀಲಕಮ್ । ಶಾರ್ಙ್ಗಧನ್ವಾ ಗದಾಧರ ಇತ್ಯಸ್ತ್ರಮ್ । ರಥಾಂಗಪಾಣಿರಕ್ಷೋಭ್ಯ ಇತಿ ನೇತ್ರಮ್ । ತ್ರಿಸಾಮಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮಗಃ ಸಾಮೇತಿ ಕವಚಮ್ । ಆನಂದಂ ಪರಬ್ರಹ್ಮೇತಿ ಯೋನಿಃ । ಋತುಃ ಸುದರ್ಶನಃ ಕಾಲ ಇತಿ ದಿಗ್ಬಂಧಃ । ಶ್ರೀವಿಶ್ವರೂಪ ಇತಿ ಧ್ಯಾನಮ್ । ಶ್ರೀ ಮಹಾವಿಷ್ಣುಪ್ರೀತ್ಯರ್ಥೇ ಶ್ರೀ ವಿಷ್ಣುಸಹಸ್ರನಾಮ (ಪಾರಾಯಣೇ) ಜಪೇ ವಿನಿಯೋಗಃ ॥

॥ ಅಥ ಧ್ಯಾನಮ್ ॥

ಕ್ಷೀರೋದನ್ವತ್ಪ್ರದೇಶೇ ಶುಚಿಮಣಿವಿಲಸತ್ಸೈಕತೇ ಮೌಕ್ತಿಕಾನಾಂ
ಮಾಲಾಕ್ಲೃಪ್ತಾಸನಸ್ಥಃ ಸ್ಫಟಿಕಮಣಿನಿಭೈರ್ಮೌಕ್ತಿಕೈರ್ಮಂಡಿತಾಂಗಃ ।
ಶುಭ್ರೈರಭ್ರೈರದಭ್ರೈರುಪರಿವಿರಚಿತೈರ್ಮುಕ್ತಪೀಯೂಷವರ್ಷೈ-
ರಾನಂದೀ ನಃ ಪುನೀಯಾದರಿನಳಿನಗದಾಶಂಖಪಾಣಿರ್ಮುಕುಂದಃ ॥

ಭೂಃ ಪಾದೌ ಯಸ್ಯ ನಾಭಿಃ ವಿಯದಸುರನಿಲಶ್ಚಂದ್ರಸೂರ್ಯೌ ಚ ನೇತ್ರೇ
ಕರ್ಣಾವಾಶಾಃ ಶಿರೋ ದ್ಯೌರ್ಮುಖಮಪಿದಹನೋ ಯಸ್ಯ ವಾಸ್ತೋಽಯಮಬ್ಧಿಃ ।
ಅಂತಸ್ಥಂ ಯಸ್ಯ ವಿಶ್ವಂ ಸುರನರಖಗಗೋಭೋಗಿಗಂಧರ್ವದೈತ್ಯೈಃ
ಚಿತ್ರಂ ರಂ ರಮ್ಯತೇ ತಂ ತ್ರಿಭುವನವಪುಷಂ ವಿಷ್ಣುಮೀಶಂ ನಮಾಮಿ ॥

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ ।
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ॥

ಮೇಘಶ್ಯಾಮಂ ಪೀತಕೌಶೇಯವಾಸಂ ಶ್ರೀವತ್ಸಾಂಕಂ ಕೌಸ್ತುಭೋದ್ಭಾಸಿತಾಂಗಮ್ ।
ಪುಣ್ಯೋಪೇತಂ ಪುಂಡರೀಕಾಯತಾಕ್ಷಂ ವಿಷ್ಣುಂ ವಂದೇ ಸರ್ವಲೋಕೈಕನಾಥಮ್ ॥

ಸಶಂಖಚಕ್ರಂ ಸಕಿರೀಟಕುಂಡಲಂ ಸಪೀತವಸ್ತ್ರಂ ಸರಸೀರುಹೇಕ್ಷಣಮ್ ।
ಸಹಾರವಕ್ಷಃಸ್ಥಲಶೋಭಿಕೌಸ್ತುಭಂ ನಮಾಮಿ ವಿಷ್ಣುಂ ಶಿರಸಾ ಚತುರ್ಭುಜಮ್ ॥

॥ ಇತಿ ಪೂರ್ವಪೀಠಿಕಾ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಥ ಶ್ರೀ ವಿಷ್ಣುಸಹಸ್ರನಾಮಸ್ತೋತ್ರಮ್

|| ಓ ವಿಶ್ವಸ್ಮೈ ನಮಃ ||

ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ ।
ಭೂತಕೃದ್ಭೂತಭೃದ್ಭಾವೋ ಭೂತಾತ್ಮಾ ಭೂತಭಾವನಃ ||೧||

ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ ।
ಅವ್ಯಯಃ ಪುರುಷಸ್ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ ||೨||

ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ ।
ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ||೩||

ಸರ್ವಃ ಶರ್ವಃ ಶಿವಃ ಸ್ಥಾಣುಃ ಭೂತಾದಿರ್ನಿಧಿರವ್ಯಯಃ ।
ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ||೪||

ಸ್ವಯಂಭೂಶ್ಶಂಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ ।
ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ||೫||

ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋಽಮರಪ್ರಭುಃ ।
ವಿಶ್ವಕರ್ಮಾ ಮನುಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ||೬||

ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ ।
ಪ್ರಭೂತಸ್ತ್ರಿಕಕುಬ್ಧಾಮ ಪವಿತ್ರಂ ಮಂಗಲಂ ಪರಮ್ ||೭||

ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ ।
ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ||೮||

ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ ।
ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ||೯||

Sri Vidyabharathi Book Centre, Sringeri

CC-O. In Public Domain. Digitized by eGangotri

ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ ।
ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ ॥೧೦॥
ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ।
ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ ॥೧೧॥
ವಸುರ್ವಸುಮನಾಃ ಸತ್ಯಃ ಸಮಾತ್ಮಾಽಸಂಮಿತಃ ಸಮಃ ।
ಅಮೋಘಃ ಪುಂಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ ॥೧೨॥
ರುದ್ರೋ ಬಹುಶಿರಾ ಬಭ್ರುರ್ವಿಶ್ವಯೋನಿಃ ಶುಚಿಶ್ರವಾಃ ।
ಅಮೃತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥೧೩॥
ಸರ್ವಗಃ ಸರ್ವವಿದ್ಭಾನುಃ ವಿಷ್ವಕ್ಸೇನೋ ಜನಾರ್ದನಃ ।
ವೇದೋ ವೇದವಿದವ್ಯಂಗೋ ವೇದಾಂಗೋ ವೇದವಿತ್ಕವಿಃ ॥೧೪॥
ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ ।
ಚತುರಾತ್ಮಾ ಚತುರ್ವ್ಯೂಹಃ ಚತುರ್ದಂಷ್ಟ್ರಶ್ಚತುರ್ಭುಜಃ ॥೧೫॥
ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ ।
ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ ॥೧೬॥
ಉಪೇಂದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ ।
ಅತೀಂದ್ರಃ ಸಂಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ ॥೧೭॥
ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ।
ಅತೀಂದ್ರಿಯೋ ಮಹಾಮಾಯೋ ಮಹೋತ್ಸಾಹೋ ಮಹಾಬಲಃ ॥
ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ ।
ಅನಿರ್ದೇಶ್ಯವಪುಃ ಶ್ರೀಮಾನ್ ಅಮೇಯಾತ್ಮಾ ಮಹಾದ್ರಿಧೃತ್ ॥೧೮॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ।
ಅನಿರುದ್ಧಃ ಸುರಾನಂದೋ ಗೋವಿಂದೋ ಗೋವಿದಾಂಪತಿಃ ॥೨೦॥

ಮರೀಚಿರ್ದಮನೋ ಹಂಸಸ್ಸುಪರ್ಣೋ ಭುಜಗೋತ್ತಮಃ ।
ಹಿರಣ್ಯನಾಭಸ್ಸುತಪಾಃ ಪದ್ಮನಾಭಃ ಪ್ರಜಾಪತಿಃ ॥೨೧॥

ಅಮೃತ್ಯುಃ ಸರ್ವದೃಕ್ ಸಿಂಹಃ ಸಂಧಾತಾ ಸಂಧಿಮಾನ್ ಸ್ಥಿರಃ ।
ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ ॥೨೨॥

ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ ।
ನಿಮಿಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥೨೩॥

ಅಗ್ರಣೀರ್ಗ್ರಾಮಣೀಃ ಶ್ರೀಮಾನ್ ನ್ಯಾಯೋ ನೇತಾ ಸಮೀರಣಃ ।
ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥೨೪॥

ಆವರ್ತನೋ ನಿವೃತ್ತಾತ್ಮಾ ಸಂವೃತಃ ಸಂಪ್ರಮರ್ದನಃ ।
ಅಹಃ ಸಂವರ್ತಕೋ ವಹ್ನಿರನಿಲೋ ಧರಣೀಧರಃ ॥೨೫॥

ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ವಿಶ್ವಭುಗ್ವಿಭುಃ ।
ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ ॥೨೬॥

ಅಸಂಖ್ಯೇಯೋಽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃಚ್ಛುಚಿಃ ।
ಸಿದ್ಧಾರ್ಥಃ ಸಿದ್ಧಸಂಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ॥೨೭॥

ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ ।
ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ॥೨೮॥

ಸುಭುಜೋ ದುರ್ಧರೋ ವಾಗ್ಮೀ ಮಹೇಂದ್ರೋ ವಸುದೋ ವಸುಃ ।
ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ ॥೨೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ ।
ಋದ್ಧಃ ಸ್ಪಷ್ಟಾಕ್ಷರೋ ಮಂತ್ರಶ್ಚಂದ್ರಾಂಶುರ್ಭಾಸ್ಕರದ್ಯುತಿಃ ॥೩೦॥
ಅಮೃತಾಂಶೂದ್ಭವೋ ಭಾನುಃ ಶಶಿಬಿಂದುಃ ಸುರೇಶ್ವರಃ ।
ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥೩೧॥
ಭೂತಭವ್ಯಭವನ್ನಾಥಃ ಪವನಃ ಪಾವನೋಽನಲಃ ।
ಕಾಮಹಾ ಕಾಮಕೃತ್ ಕಾಂತಃ ಕಾಮಃ ಕಾಮಪ್ರದಃ ಪ್ರಭುಃ ॥೩೨॥
ಯುಗಾದಿಕೃದ್ಯುಗಾವರ್ತೋ ನೈಕಮಾಯೋ ಮಹಾಶನಃ ।
ಅದೃಶ್ಯೋಽವ್ಯಕ್ತರೂಪಶ್ಚ ಸಹಸ್ರಜಿದನಂತಜಿತ್ ॥೩೩॥
ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಶಿಖಂಡೀ ನಹುಷೋ ವೃಷಃ ।
ಕ್ರೋಧಹಾ ಕ್ರೋಧಕೃತ್ಕರ್ತಾ ವಿಶ್ವಬಾಹುರ್ಮಹೀಧರಃ ॥೩೪॥
ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ ।
ಅಪಾಂನಿಧಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ ॥೩೫॥
ಸ್ಕಂದಃ ಸ್ಕಂದಧರೋ ಧುರ್ಯೋ ವರದೋ ವಾಯುವಾಹನಃ ।
ವಾಸುದೇವೋ ಬೃಹದ್ಭಾನುರಾದಿದೇವಃ ಪುರಂದರಃ ॥೩೬॥
ಅಶೋಕಸ್ತಾರಣಸ್ತಾರಃ ಶೂರಃ ಶೌರಿರ್ಜನೇಶ್ವರಃ ।
ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ ॥೩೭॥
ಪದ್ಮನಾಭೋಽರವಿಂದಾಕ್ಷಃ ಪದ್ಮಗರ್ಭಃ ಶರೀರಭೃತ್ ।
ಮಹರ್ದ್ಧಿರೃದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ ॥೩೮॥
ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ ।
ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ ಸಮಿತಿಂಜಯಃ ॥೩೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಸ್ಸಹಃ ।
ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ ॥೪೦॥

ಉದ್ಭವಃ ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ ।
ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ॥೪೧॥

ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ ।
ಪರರ್ದ್ಧಿಃ ಪರಮಸ್ಪಷ್ಟಸ್ತುಷ್ಟಃ ಪುಷ್ಟಃ ಶುಭೇಕ್ಷಣಃ ॥೪೨॥

ರಾಮೋ ವಿರಾಮೋ ವಿರತೋ ಮಾರ್ಗೋ ನೇಯೋ ನಯೋಽನಯಃ
ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋಧರ್ಮವಿದುತ್ತಮಃ ॥೪೩॥

ವೈಕುಂಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ।
ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ ॥೪೪॥

ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ ।
ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ ॥೪೫॥

ವಿಸ್ತಾರಃ ಸ್ಥಾವರಃ ಸ್ಥಾಣುಃ ಪ್ರಮಾಣಂ ಬೀಜಮವ್ಯಯಮ್ ।
ಅರ್ಥೋಽನರ್ಥೋ ಮಹಾಕೋಶೋ ಮಹಾಭೋಗೋ ಮಹಾಧನಃ ॥

ಅನಿರ್ವಿಣ್ಣಃ ಸ್ಥವಿಷ್ಠೋಽಭೂರ್ಧರ್ಮಯೂಪೋ ಮಹಾಮಖಃ ।
ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ ಕ್ಷಾಮಃ ಸಮೀಹನಃ ॥೪೭॥

ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂಗತಿಃ ।
ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥೪೮॥

ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ।
ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥೪೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ ।
ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥೫೦॥

ಧರ್ಮಗುಬ್ಧರ್ಮಕೃದ್ಧರ್ಮೀ ಸದಸತ್ ಕ್ಷರಮಕ್ಷರಮ್ ।
ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥೫೧॥

ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತಮಹೇಶ್ವರಃ ।
ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ಗುರುಃ ॥೫೨॥

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ಶರೀರಭೂತಭೃದ್ಭೋಕ್ತಾ ಕಪೀಂದ್ರೋ ಭೂರಿದಕ್ಷಿಣಃ ॥೫೩॥

ಸೋಮಪೋಽಮೃತಪಃ ಸೋಮಃ ಪುರುಜಿತ್ ಪುರುಸತ್ತಮಃ ।
ವಿನಯೋ ಜಯಃ ಸತ್ಯಸಂಧೋ ದಾಶಾರ್ಹಃ ಸಾತ್ವತಾಂ ಪತಿಃ ॥೫೪॥

ಜೀವೋ ವಿನಯಿತಾ ಸಾಕ್ಷೀ ಮುಕುಂದೋಽಮಿತವಿಕ್ರಮಃ ।
ಅಂಭೋನಿಧಿರನಂತಾತ್ಮಾ ಮಹೋದಧಿಶಯೋಽಂತಕಃ ॥೫೫॥

ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ ।
ಆನಂದೋ ನಂದನೋ ನಂದಃ ಸತ್ಯಧರ್ಮಾ ತ್ರಿವಿಕ್ರಮಃ ॥೫೬॥

ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ ।
ತ್ರಿಪದಸ್ತ್ರಿದಶಾಧ್ಯಕ್ಷೋ ಮಹಾಶೃಂಗಃ ಕೃತಾಂತಕೃತ್ ॥೫೭॥

ಮಹಾವರಾಹೋ ಗೋವಿಂದಃ ಸುಷೇಣಃ ಕನಕಾಂಗದೀ ।
ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ ॥೫೮॥

ವೇಧಾಃ ಸ್ವಾಂಗೋಽಜಿತಃ ಕೃಷ್ಣೋ ದೃಢಃ ಸಂಕರ್ಷಣೋಽಚ್ಯುತಃ ।
ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ ॥೫೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಾನ್ ಭಗಹಾಽನಂದೀ ವನಮಾಲೀ ಹಲಾಯುಧಃ ।
ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ॥೬೦॥

ಸುಧನ್ವಾ ಖಂಡಪರಶುರ್ದಾರುಣೋ ದ್ರವಿಣಪ್ರದಃ ।
ದಿವಸ್ಪೃಕ್ ಸರ್ವದೃಗ್ವ್ಯಾಸೋ ವಾಚಸ್ಪತಿರಯೋನಿಜಃ ॥೬೧॥

ತ್ರಿಸಾಮಾ ಸಾಮಗಸ್ಸಾಮ ನಿರ್ವಾಣಂ ಭೇಷಜಂ ಭಿಷಕ್ ।
ಸಂನ್ಯಾಸಕೃಚ್ಛಮಃ ಶಾಂತೋ ನಿಷ್ಠಾ ಶಾಂತಿಃ ಪರಾಯಣಮ್ ॥೬೨॥

ಶುಭಾಂಗಃ ಶಾಂತಿದಃ ಸ್ರಷ್ಟಾ ಕುಮುದಃ ಕುವಲೇಶಯಃ ।
ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥೬೩॥

ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ ।
ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂವರಃ ॥೬೪॥

ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ ।
ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮಾನ್ ಲೋಕತ್ರಯಾಶ್ರಯಃ ॥೬೫॥

ಸ್ವಕ್ಷಃ ಸ್ವಂಗಃ ಶತಾನಂದೋ ನಂದಿರ್ಜ್ಯೋತಿರ್ಗಣೇಶ್ವರಃ ।
ವಿಜಿತಾತ್ಮಾ ವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ ॥೬೬॥

ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಸ್ಥಿರಃ ।
ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ ॥೬೭॥

ಅರ್ಚಿಷ್ಮಾನರ್ಚಿತಃ ಕುಂಭೋ ವಿಶುದ್ಧಾತ್ಮಾ ವಿಶೋಧನಃ ।
ಅನಿರುದ್ಧೋಽಪ್ರತಿರಥಃ ಪ್ರದ್ಯುಮ್ನೋಽಮಿತವಿಕ್ರಮಃ ॥೬೮॥

ಕಾಲನೇಮಿನಿಹಾ ವೀರಃ ಶೌರಿಃ ಶೂರಜನೇಶ್ವರಃ ।
ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ ॥೬೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಮದೇವಃ ಕಾಮಪಾಲಃ ಕಾಮೀ ಕಾಂತಃ ಕೃತಾಗಮಃ ।
ಅನಿರ್ದೇಶ್ಯವಪುರ್ವಿಷ್ಣುಃ ವೀರೋಽನಂತೋ ಧನಂಜಯಃ ॥೭೦॥

ಬ್ರಹ್ಮಣ್ಯೋ ಬ್ರಹ್ಮಕೃದ್ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ ।
ಬ್ರಹ್ಮವಿದ್ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ ॥೭೧॥

ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ ।
ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋ ಮಹಾಹವಿಃ ॥೭೨॥

ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ ರಣಪ್ರಿಯಃ ।
ಪೂರ್ಣಃ ಪೂರಯಿತಾ ಪುಣ್ಯಃ ಪುಣ್ಯಕೀರ್ತಿರನಾಮಯಃ ॥೭೩॥

ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ ।
ವಸುಪ್ರದೋ ವಾಸುದೇವೋ ವಸುರ್ವಸುಮನಾ ಹವಿಃ ॥೭೪॥

ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ ।
ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ ॥೭೫॥

ಭೂತಾವಾಸೋ ವಾಸುದೇವಃ ಸರ್ವಾಸುನಿಲಯೋಽನಲಃ ।
ದರ್ಪಹಾ ದರ್ಪದೋ ದೃಪ್ತೋ ದುರ್ಧರೋಽಥಾಪರಾಜಿತಃ ॥೭೬॥

ವಿಶ್ವಮೂರ್ತಿರ್ಮಹಾಮೂರ್ತಿಃ ದೀಪ್ತಮೂರ್ತಿರಮೂರ್ತಿಮಾನ್ ।
ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥೭೭॥

ಏಕೋನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ ।
ಲೋಕಬಂಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ ॥೭೮॥

ಸುವರ್ಣವರ್ಣೋ ಹೇಮಾಂಗೋ ವರಾಂಗಶ್ಚಂದನಾಂಗದೀ ।
ವೀರಹಾ ವಿಷಮಶ್ಶೂನ್ಯೋ ಘೃತಾಶೀರಚಲಶ್ಚಲಃ ॥೭೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮಾನೀ ಮಾನದೋ ಮಾನ್ಯೋ ಲೋಕಸ್ವಾಮೀ ತ್ರಿಲೋಕಧೃತ್ ।
ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ ॥೮೦॥

ತೇಜೋ ವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂವರಃ ।
ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಂಗೋ ಗದಾಗ್ರಜಃ ॥೮೧॥

ಚತುರ್ಮೂರ್ತಿಶ್ಚತುರ್ಬಾಹುಃ ಚತುರ್ವ್ಯೂಹಶ್ಚತುರ್ಗತಿಃ ।
ಚತುರಾತ್ಮಾ ಚತುರ್ಭಾವಃ ಚತುರ್ವೇದವಿದೇಕಪಾತ್ ॥೮೨॥

ಸಮಾವರ್ತೋಽನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ ।
ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರಾರಿಹಾ ॥೮೩॥

ಶುಭಾಂಗೋ ಲೋಕಸಾರಂಗಃ ಸುತಂತುಸ್ತಂತುವರ್ಧನಃ ।
ಇಂದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ ॥೮೪॥

ಉದ್ಭವಃ ಸುಂದರಃ ಸುಂದೋ ರತ್ನನಾಭಃ ಸುಲೋಚನಃ ।
ಅರ್ಕೋ ವಾಜಸನಃ ಶೃಂಗೀ ಜಯಂತಃ ಸರ್ವವಿಜ್ಜಯೀ ॥೮೫॥

ಸುವರ್ಣಬಿಂದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ ।
ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ ॥೮೬॥

ಕುಮುದಃ ಕುಂದರಃ ಕುಂದಃ ಪರ್ಜನ್ಯಃ ಪಾವನೋಽನಿಲಃ ।
ಅಮೃತಾಂಶೋಽಮೃತವಪುಃ ಸರ್ವಜ್ಞಃ ಸರ್ವತೋಮುಖಃ ॥೮೭॥

ಸುಲಭಃ ಸುವ್ರತಃ ಸಿದ್ಧಃ ಶತ್ರುಜಿಚ್ಛತ್ರುತಾಪನಃ ।
ನ್ಯಗ್ರೋಧೋದುಂಬರೋಽಶ್ವತ್ಥಃ ಚಾಣೂರಾಂಧ್ರನಿಷೂದನಃ ॥೮೮॥

ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ ।
ಅಮೂರ್ತಿರನಘೋಽಚಿಂತ್ಯೋ ಭಯಕೃದ್ಭಯನಾಶನಃ ॥೮೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಣುರ್ಬೃಹತ್ ಕೃಶಃ ಸ್ಥೂಲೋ ಗುಣಭೃನ್ನಿರ್ಗುಣೋ ಮಹಾನ್ ।
ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ ॥೯೦॥

ಭಾರಭೃತ್ ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।
ಆಶ್ರಮಃ ಶ್ರಮಣಃ ಕ್ಷಾಮಃ ಸುಪರ್ಣೋ ವಾಯುವಾಹನಃ ॥೯೧॥

ಧನುರ್ಧರೋ ಧನುರ್ವೇದೋ ದಂಡೋ ದಮಯಿತಾ ದಮಃ ।
ಅಪರಾಜಿತಃ ಸರ್ವಸಹೋ ನಿಯಂತಾಽನಿಯಮೋಽಯಮಃ ॥೯೨॥

ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ ।
ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ ಪ್ರೀತಿವರ್ಧನಃ ॥೯೩॥

ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಗ್ವಿಭುಃ ।
ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ ॥೯೪॥

ಅನಂತೋ ಹುತಭುಗ್ಭೋಕ್ತಾ ಸುಖದೋ ನೈಕಜೋಽಗ್ರಜಃ ।
ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ ॥೯೫॥

ಸನಾತ್ ಸನಾತನತಮಃ ಕಪಿಲಃ ಕಪಿರವ್ಯಯಃ ।
ಸ್ವಸ್ತಿದಃ ಸ್ವಸ್ತಿಕೃತ್ ಸ್ವಸ್ತಿ ಸ್ವಸ್ತಿಭುಕ್ ಸ್ವಸ್ತಿದಕ್ಷಿಣಃ ॥೯೬॥

ಅರೌದ್ರಃ ಕುಂಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ ।
ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥೯೭॥

ಅಕ್ರೂರಃ ಪೇಶಲೋ ದಕ್ಷೋ ದಕ್ಷಿಣಃ ಕ್ಷಮಿಣಾಂ ವರಃ ।
ವಿದ್ವತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥೯೮॥

ಉತ್ತಾರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ ।
ವೀರಹಾ ರಕ್ಷಣಃ ಸಂತೋ ಜೀವನಃ ಪರ್ಯವಸ್ಥಿತಃ ॥೯೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಂತರೂಪೋಽನಂತಶ್ರೀರ್ಜಿತಮನ್ಯುರ್ಭಯಾಪಹಃ ।
ಚತುರಸ್ರೋ ಗಭೀರಾತ್ಮಾ ವಿದಿಶೋ ವ್ಯಾದಿಶೋ ದಿಶಃ ॥೧೦೦॥
ಅನಾದಿರ್ಭೂರ್ಭುವೋ ಲಕ್ಷ್ಮೀಃ ಸುವೀರೋ ರುಚಿರಾಂಗದಃ ।
ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ ॥೧೦೧॥
ಆಧಾರನಿಲಯೋಽಧಾತಾ ಪುಷ್ಪಹಾಸಃ ಪ್ರಜಾಗರಃ ।
ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ ॥೧೦೨॥
ಪ್ರಮಾಣಂ ಪ್ರಾಣನಿಲಯಃ ಪ್ರಾಣಭೃತ್ ಪ್ರಾಣಜೀವನಃ ।
ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮಮೃತ್ಯುಜರಾತಿಗಃ ॥೧೦೩॥
ಭೂರ್ಭುವಃ ಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ ।
ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ ॥೧೦೪॥
ಯಜ್ಞಭೃದ್ಯಜ್ಞಕೃದ್ಯಜ್ಞೀ ಯಜ್ಞಭುಗ್ಯಜ್ಞಸಾಧನಃ ।
ಯಜ್ಞಾಂತಕೃದ್ಯಜ್ಞಗುಹ್ಯಮನ್ನಮನ್ನಾದ ಏವ ಚ ॥೧೦೫॥
ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ ।
ದೇವಕೀನಂದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ॥೧೦೬॥
ಶಂಖಭೃನ್ನಂದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।
ರಥಾಂಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥೧೦೭॥

ಸರ್ವಪ್ರಹರಣಾಯುಧ ಓಂ ನಮ ಇತಿ

॥ ಉತ್ತರಪೀಠಿಕಾ ॥

ವನಮಾಲೀ ಗದೀ ಶಾರ್ಙ್ಗೀ ಶಂಖೀ ಚಕ್ರೀ ಚ ನಂದಕೀ ।
ಶ್ರೀಮನ್ನಾರಾಯಣೋ ವಿಷ್ಣುರ್ವಾಸುದೇವೋಽಭಿರಕ್ಷತು ॥

(ಈ ಶ್ಲೋಕವನ್ನು 3 ಸಲ ಹೇಳಬೇಕು)

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲಶ್ರುತಿಃ

ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ।
ನಾಮ್ನಾಂ ಸಹಸ್ರಂ ದಿವ್ಯಾನಾಂ ಅಶೇಷೇಣ ಪ್ರಕೀರ್ತಿತಮ್ ॥೧॥
ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।
ನಾಶುಭಂ ಪ್ರಾಪ್ನುಯಾತ್ ಕಿಂಚಿತ್ಸೋಽಮುತ್ರೇಹ ಚ ಮಾನವಃ ॥೨॥
ವೇದಾಂತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ಧನಸಮೃದ್ಧಃ ಸ್ಯಾತ್ ಶೂದ್ರಃ ಸುಖಮವಾಪ್ನುಯಾತ್ ॥೩॥
ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮಮರ್ಥಾರ್ಥೀ ಚಾರ್ಥಮಾಪ್ನುಯಾತ್ ।
ಕಾಮಾನವಾಪ್ನುಯಾತ್ ಕಾಮೀ ಪ್ರಜಾರ್ಥೀ ಚಾಪ್ನುಯಾತ್ ಪ್ರಜಾಮ್ ॥೪॥
ಭಕ್ತಿಮಾನ್ ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ ।
ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ ಪ್ರಕೀರ್ತಯೇತ್ ॥೫॥
ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿಪ್ರಾಧಾನ್ಯಮೇವ ಚ ।
ಅಚಲಾಂ ಶ್ರಿಯಮಾಪ್ನೋತಿ ಶ್ರೇಯಃ ಪ್ರಾಪ್ನೋತ್ಯನುತ್ತಮಮ್ ॥೬॥
ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿಂದತಿ ।
ಭವತ್ಯರೋಗೋ ದ್ಯುತಿಮಾನ್ ಬಲರೂಪಗುಣಾನ್ವಿತಃ ॥೭॥
ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ।
ಭಯಾನ್ಮುಚ್ಯೇತ ಭೀತಸ್ತು ಮುಚ್ಯೇತಾಪನ್ನ ಆಪದಃ ॥೮॥
ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥೯॥
ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।
ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥೧೦॥

Sri Vidyabharathi Book Centre, Sringeri

CC-O. In Public Domain. Digitized by eGangotri

ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥೧೧॥
ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।
ಯುಜ್ಯೇತಾತ್ಮಸುಖಕ್ಷಾಂತಿಶ್ರೀಧೃತಿಸ್ಮೃತಿಕೀರ್ತಿಭಿಃ ॥೧೨॥
ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।
ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥೧೩॥
ದ್ಯೌಃ ಸಚಂದ್ರಾರ್ಕನಕ್ಷತ್ರಖಂ ದಿಶೋ ಭೂರ್ಮಹೋದಧಿಃ ।
ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥೧೪॥
ಸಸುರಾಸುರಗಂಧರ್ವಂ ಸಯಕ್ಷೋರಗರಾಕ್ಷಸಮ್ ।
ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥೧೫॥
ಇಂದ್ರಿಯಾಣಿ ಮನೋಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ ।
ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥೧೬॥
ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪತೇ ।
ಆಚಾರಪ್ರಭವೋ ಧರ್ಮೋ ಧರ್ಮಸ್ಯ ಪ್ರಭುರಚ್ಯುತಃ ॥೧೭॥
ಋಷಯಃ ಪಿತರೋ ದೇವಾ ಮಹಾಭೂತಾನಿ ಧಾತವಃ ।
ಜಂಗಮಾಜಂಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥೧೮॥
ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾದಿಕರ್ಮ ಚ ।
ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ ಸರ್ವಂ ಜನಾರ್ದನಾತ್ ॥೧೯॥
ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥
ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।
ಪಠೇದ್ಯ ಇಚ್ಛೇತ್ ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥೨೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್ ।
ಭಜಂತಿ ಯೇ ಪುಷ್ಕರಾಕ್ಷಂ ನ ತೇ ಯಾಂತಿ ಪರಾಭವಮ್ ॥೨೨॥

ನ ತೇ ಯಾಂತಿ ಪರಾಭವಮ್ ಓಂ ನಮ ಇತಿ ॥

ಅರ್ಜುನ ಉವಾಚ -

ಪದ್ಮಪತ್ರ ವಿಶಾಲಾಕ್ಷ ಪದ್ಮನಾಭ ಸುರೋತ್ತಮ ।
ಭಕ್ತಾನಾಮನುರಕ್ತಾನಾಂ ತ್ರಾತಾ ಭವ ಜನಾರ್ದನ ॥

ಶ್ರೀ ಭಗವಾನುವಾಚ -

ಯೋ ಮಾಂ ನಾಮಸಹಸ್ರೇಣ ಸ್ತೋತುಮಿಚ್ಛತಿ ಪಾಂಡವ ।
ಸೋಽಹಮೇಕೇನ ಶ್ಲೋಕೇನ ಸ್ತುತ ಏವ ನ ಸಂಶಯಃ ॥

ಸ್ತುತ ಏವ ನ ಸಂಶಯ ಓಂ ನಮ ಇತಿ ॥

ವ್ಯಾಸ ಉವಾಚ -

ವಾಸನಾದ್ವಾಸುದೇವಸ್ಯ ವಾಸಿತಂ ತೇ ಜಗತ್ರ್ಯಯಮ್ ।
ಸರ್ವಭೂತನಿವಾಸೋಽಸಿ ವಾಸುದೇವ ನಮೋಽಸ್ತು ತೇ ॥

ಶ್ರೀವಾಸುದೇವ ನಮೋಽಸ್ತುತ ಓಂ ನಮ ಇತಿ ॥

ಪಾರ್ವತ್ಯುವಾಚ -

ಕೇನೋಪಾಯೇನ ಲಘುನಾ ವಿಷ್ಣೋರ್ನಾಮಸಹಸ್ರಕಮ್ ।
ಪಠ್ಯತೇ ಪಂಡಿತೈರ್ನಿತ್ಯಂ ಶ್ರೋತುಮಿಚ್ಛಾಮ್ಯಹಂ ಪ್ರಭೋ ॥

ಈಶ್ವರ ಉವಾಚ -

ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ ।
ಸಹಸ್ರನಾಮತತ್ತುಲ್ಯಂ ರಾಮನಾಮ ವರಾನನೇ ॥

ಶ್ರೀರಾಮನಾಮ ವರಾನನ ಓಂ ನಮ ಇತಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಹ್ಮೋವಾಚ -

ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟಿಯುಗಧಾರಿಣೇ ನಮಃ ॥

ಶ್ರೀ ಸಹಸ್ರಕೋಟಿಯುಗಧಾರಿಣೇ ಓಂ ನಮ ಇತಿ ॥

ಸಂಜಯ ಉವಾಚ -

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥

ಶ್ರೀ ಭಗವಾನುವಾಚ -

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಆರ್ತಾ ವಿಷಣ್ಣಾಶ್ಶಿಥಿಲಾಶ್ಚ ಭೀತಾಃ
ಘೋರೇಷು ಚ ವ್ಯಾಧಿಷು ವರ್ತಮಾನಾಃ
ಸಂಕೀರ್ತ್ಯ ನಾರಾಯಣಶಬ್ದಮಾತ್ರಂ
ವಿಮುಕ್ತದುಃಖಾಃ ಸುಖಿನೋ ಭವಂತಿ ॥

ಇತಿ ಶ್ರೀಮಹಾಭಾರತೇ ಅನುಶಾಸನಿಕಪರ್ವಣಿ ಭೀಷ್ಮ ಯುಧಿಷ್ಠಿರ ಸಂವಾದೇ
ಶ್ರೀವಿಷ್ಣೋರ್ದಿವ್ಯಸಹಸ್ರನಾಮ ಸ್ತೋತ್ರಮ್

॥ ಓಂ ತತ್ಸತ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಮಜಪದ ವೈಶಿಷ್ಟ್ಯ

- ವಿದ್ವಾನ್ ಎನ್. ರಂಗನಾಥಶರ್ಮಾ

ಭಾರತಯುದ್ಧ ಮುಗಿದು ಧರ್ಮರಾಜನಿಗೆ ಹಸ್ತಿನಾವತಿಯಲ್ಲಿ ಪಟ್ಟಾಭಿಷೇಕವಾಯಿತು. ಅನಂತರ ಶ್ರೀಕೃಷ್ಣನು ಧರ್ಮರಾಜನಿಗೆ ರಾಜನೀತಿಯೇ ಮೊದಲಾದ ಧರ್ಮಗಳನ್ನು ತಿಳಿಸಿಕೊಡಬೇಕೆಂಬ ಕಾರುಣ್ಯದಿಂದ "ಧರ್ಮರಾಜ, ನೀನು ಪಟ್ಟಾಭಿಷಿಕ್ತನಾಗಿದ್ದೀಯೆ. ಇನ್ನು ಮೇಲೆ ನೀನು ಶಾಸ್ತ್ರವಿಹಿತವಾದ ಧರ್ಮವನ್ನನುಸರಿಸಿ ರಾಜ್ಯಪಾಲನೆ ಮಾಡಬೇಕಾಗಿದೆ. ಈಗ ಒಂದು ಜ್ಞಾನ ಜ್ಯೋತಿಯು ಸ್ವಲ್ಪದಿನಗಳಲ್ಲಿ ಅಸ್ತಮಿಸುತ್ತದೆ. ಆದ್ದರಿಂದ ಅಷ್ಟರಲ್ಲಿ ನೀನು ಸಾಕಷ್ಟು ಧರ್ಮೋಪದೇಶವನ್ನು ಪಡೆಯಬೇಕು. ಇಲ್ಲದಿದ್ದರೆ ನಿನಗೆ ನಿಜವಾಗಿ ಧರ್ಮವನ್ನು ಬೋಧಿಸತಕ್ಕವರು ಬೇರೆ ಯಾರಿರುತ್ತಾರೆ ? ಆ ಜ್ಞಾನ ಜ್ಯೋತಿಯೇ ನಿನ್ನ ಭೀಷ್ಮಪಿತಾಮಹ" ಎಂದು ಹೇಳಿದನು. ಅದರಂತೆ ಧರ್ಮ ರಾಜನು ಭೀಷ್ಮನ ಬಳಿಗೆ ಹೋಗಲು ಇಚ್ಛಿಸಿದಾಗ, ಶ್ರೀಕೃಷ್ಣನು ಪಾಂಡವ ರೆಲ್ಲರನ್ನೂ ಕರೆದುಕೊಂಡು ಹೋಗಿ ಭೀಷ್ಮಾಚಾರ್ಯನ ದರ್ಶನವನ್ನು ಮಾಡಿಸಿ, ಯುಧಿಷ್ಠಿರನಿಗೆ ಧರ್ಮೋಪದೇಶವನ್ನು ಮಾಡಬೇಕೆಂದು ಭೀಷ್ಮನನ್ನು ಕೇಳಿ ಕೊಳ್ಳುತ್ತಾನೆ. ಶರಶಯ್ಯೆಯಲ್ಲಿ ಮಲಗಿ ಅತ್ಯಂತ ಯಾತನೆಯನ್ನನುಭವಿಸುತ್ತಿದ್ದ ಭೀಷ್ಮನಿಗೆ ಶ್ರೀಕೃಷ್ಣನ ಅನುಗ್ರಹದಿಂದ ಎಲ್ಲ ಯಾತನೆಯೂ ಕೊನೆಗೊಳ್ಳು ತ್ತದೆ. ನೂತನೋತ್ಸಾಹವು ತಲೆದೋರುತ್ತದೆ. ಅನಂತರ ಪ್ರತಿದಿನವೂ ಭೀಷ್ಮನು ಧರ್ಮರಾಯನ ಪ್ರಶ್ನೆಗಳಿಗೆ ಉತ್ತರವನ್ನೀಯುತ್ತ ರಾಜಧರ್ಮ, ವರ್ಣಾಶ್ರಮ ಧರ್ಮ- ಮುಂತಾದ ಎಲ್ಲ ಧರ್ಮಸ್ವರೂಪಗಳನ್ನೂ ತಿಳಿಸಿಕೊಡುತ್ತಾನೆ. ಶಾಂತಿಪರ್ವ ಮೊದಲಾದವು ಭೀಷ್ಮನ ಉಪದೇಶಗಳಿಂದ ತುಂಬಿವೆ. ಅನುಶಾಸನ ಪರ್ವದ ೧೪೯ನೆಯ ಅಧ್ಯಾಯದಲ್ಲಿ ವಿಷ್ಣುಸಹಸ್ರನಾಮಗಳು ಬರುತ್ತವೆ. ಧರ್ಮರಾಜನ ಕೋರಿಕೆಯಂತೆ ಭೀಷ್ಮಾಚಾರ್ಯನು ಹೇಳಿದ ನಾಮಗಳಿವು.

ಯುಧಿಷ್ಠಿರನು ಕೇಳಿದ ಎಲ್ಲ ಧರ್ಮಗಳನ್ನೂ ಭೀಷ್ಮನು ಹೇಳುತ್ತಾನೆ. ಈ ಲೋಕದಲ್ಲಿ ಅಭ್ಯುದಯಕ್ಕೂ ಮತ್ತು ಮೋಕ್ಷಕ್ಕೂ ಕಾರಣವಾದದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವುದೋ ಅದು ಧರ್ಮ. ಅನಂತರ ಮತ್ತೆ ಯುಧಿಷ್ಠಿರನು ಕೆಲವು ಪ್ರಶ್ನೆಗಳನ್ನೆತ್ತುತ್ತಾನೆ -

೧. ಪಿತಾಮಹ, ಸಮಸ್ತ ಶಾಸ್ತ್ರಗಳಲ್ಲಿಯೂ ಪ್ರತಿಪಾದಿತನಾದ ದೇವತೆ ಯಾರು ? ೨. ಸರ್ವರಿಗೂ ಗತಿಯೂ ಮತಿಯೂ ಆದ ಯಾವ ದೇವನನ್ನು ಸ್ಮರಣೆ ಮಾಡಿದರೆ, ಪೂಜಿಸಿದರೆ ಅತಿಶಯವಾದ ಮಂಗಳವು ನಮಗೆ ದೊರೆಯುತ್ತದೆ ? ೩. ನೀನು ಬೋಧಿಸಿದ ಎಲ್ಲ ಧರ್ಮಗಳಲ್ಲಿಯೂ ಪರಮೋತ್ತಮವಾದ ಧರ್ಮವು ಯಾವುದು ? ೪. ಜನರೆಲ್ಲರಿಗೂ ಆಚರಿಸಲು ಸುಲಭವಾದ ಧರ್ಮಮಾರ್ಗ ಯಾವುದು ? ೫. ಯಾವ ಮಂತ್ರವನ್ನು ಜಪಿಸಿದರೆ ಮಾನವನು ಈ ಸಂಸಾರಬಂಧನದಿಂದ ಬಿಡುಗಡೆ ಹೊಂದುತ್ತಾನೆ ? - ಎಂದು ಆತನು ಮಾಡಿದ ಪ್ರಶ್ನೆಗಳು.

ಇವುಗಳ ತಾತ್ಪರ್ಯವಿಷ್ಟು. ಧರ್ಮಮಾರ್ಗಗಳು ಹಲವಾರು ಇದ್ದರೂ ಆಚರಿಸುವುದು ಕಷ್ಟವಾಗುತ್ತದೆ. ಇನ್ನು ಮೇಲೆ ಜನರು ಕಠಿಣವಾದ ತಪಸ್ಸು, ಯಾಗ-ಮೊದಲಾದವುಗಳನ್ನು ನಡೆಸಲಾರದೆ ಬಿಟ್ಟುಬಿಡುತ್ತಾರೆ. ಆದ್ದರಿಂದ ಸುಲಭವಾದ ಒಂದು ದಾರಿ ಇದ್ದರೆ ಅದನ್ನು ತಿಳಿಸಿಕೊಡಬೇಕು ಎಂದ ಯುಧಿಷ್ಠಿರನ ಇಂಗಿತವೆಲ್ಲವನ್ನೂ ಅರಿತ ಭೀಷ್ಮನು ವಿಷ್ಣುವೇ ಸರ್ವೋತ್ತಮನಾದ ದೇವತೆಯೆಂದೂ ಆತನ ನಾಮಗಳನ್ನು ಜಪಿಸುವುದೇ ಪರಮೋತ್ತಮ ಧರ್ಮವೆಂದೂ ಈ ಜಪವೇ ಅತ್ಯಂತ ಸುಲಭವಾದ ಮಾರ್ಗವೆಂದೂ ಅವನ ಎಲ್ಲ ಪ್ರಶ್ನೆಗಳಿಗೂ ಉತ್ತರವಾಗಿ ಹೇಳಿ, ಈ ವಿಷ್ಣುಸಹಸ್ರನಾಮಗಳನ್ನು ಉಪದೇಶಿಸಿದ್ದಾನೆ. ಅದರಿಂದ ಈ ವಿಷ್ಣುಸಹಸ್ರನಾಮ ಜಪದ ಶ್ರೇಷ್ಠತೆಯನ್ನೂ ಪ್ರಯೋಜನವನ್ನು ನಾವು ನಿಶ್ಚಯಿಸಿಕೊಳ್ಳಬೇಕು.

ಇಲ್ಲಿ ಇನ್ನೊಂದು ವಿಷಯವನ್ನು ಮೊದಲೇ ತಿಳಿಸಬೇಕಾಗಿದೆ. ಭೀಷ್ಮನು ಉಪದೇಶಿಸಿದ ವಿಷ್ಣುಸಹಸ್ರನಾಮವು ಪರಮಶ್ರೇಷ್ಠವಾದದ್ದೆಂಬುದು ನಿಶ್ಚಿತ. ಇದರಿಂದ ಶಿವಸಹಸ್ರನಾಮ, ಗಣಪತಿಸಹಸ್ರನಾಮ, ಲಲಿತಾಸಹಸ್ರನಾಮ - ಮೊದಲಾದವು ಕಳಪೆಯಾದವೆಂದು ಯಾರೂ ತಿಳಿಯಬಾರದು. ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಭರತಖಂಡದಲ್ಲಿ ವೈದಿಕಧರ್ಮವು ಏಕೇಶ್ವರವಾದವನ್ನು ಎತ್ತಿ ಹಿಡಿದಿದೆ. ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ನಡೆಸತಕ್ಕ ಪ್ರಭು ಒಬ್ಬನೇ. ಆತನನ್ನು ಈಶ್ವರ ಎನ್ನುತ್ತೇವೆ. ನ್ಯಾಯ, ವೈಶೇಷಿಕಾದಿ ದರ್ಶನಗಳು ದೇವರನ್ನು 'ಈಶ್ವರ' ಎಂದು ಮಾತ್ರ ಹೇಳಿವೆ. ಶಿವ, ವಿಷ್ಣು - ಮುಂತಾದ ಶಬ್ದಗಳನ್ನು ಅವು ಬಳಸಿಲ್ಲ. ವೇದಾಂತದರ್ಶನವು ಮಾತ್ರ ಬ್ರಹ್ಮ, ಆತ್ಮ, ಸತ್ ಎಂಬ ಶಬ್ದಗಳನ್ನು ವಿಶೇಷವಾಗಿ ಬಳಸುತ್ತದೆ. ಈ ಬ್ರಹ್ಮ, ಆತ್ಮ ಅಥವಾ ಸತ್ ಎಂಬುದೇ ಪರಮೋತ್ತಮವಾದ ತತ್ತ್ವ. ಅದು ತನ್ನ ಮಾಯಾಶಕ್ತಿಯನ್ನವಲಂಬಿಸಿ ಸಗುಣವಾದಾಗ ಈಶ್ವರ ಎಂಬ ಹೆಸರನ್ನು ಪಡೆಯುತ್ತದೆ. ಇದಕ್ಕೆ ಪರ್ಯಾಯವಾಗಿ ಭಗವಂತನೆಂಬ ಶಬ್ದವನ್ನೂ ಬಳಸುತ್ತಾರೆ. ಮಾಯಾಶಕ್ತಿಯಲ್ಲಿ ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳಿವೆ. ಇವುಗಳಲ್ಲಿ ರಜೋಗುಣವನ್ನಾಶ್ರಯಿಸಿದಾಗ ಈಶ್ವರನೇ ಬ್ರಹ್ಮನೆನಿಸುತ್ತಾನೆ. ಆತನು ಈ ವಿಶ್ವವನ್ನು ಸೃಜಿಸುತ್ತಾನೆ. ಆತನೇ ಸತ್ತ್ವಗುಣವನ್ನಾಶ್ರಯಿಸಿ ವಿಷ್ಣುವೆಂಬ ಹೆಸರಿನಿಂದ ಈ ವಿಶ್ವವನ್ನು ಪಾಲಿಸುತ್ತಾನೆ. ಆತನೇ ತಮೋಗುಣವನ್ನಾಶ್ರಯಿಸಿ ಶಿವನಾಗಿ, ರುದ್ರನಾಗಿ ಈ ವಿಶ್ವವನ್ನು ಸಂಹರಿಸಿ ಪ್ರಳಯವನ್ನುಂಟು ಮಾಡುತ್ತಾನೆ. ಸೃಷ್ಟಿ, ಸ್ಥಿತಿ, ಲಯ - ಇವು ಮೂರು ಭಗವಂತನ ಲೀಲೆಗಳು. ಈ ಲೀಲೆಗಳನ್ನೇಕೆ ನಡೆಸುತ್ತಾನೆಂದು ಪ್ರಶ್ನಿಸಲು ನಮಗೆ ಅಧಿಕಾರವಿಲ್ಲ. ಅದು ಆತನ ಇಚ್ಛೆಗೆ ಒಳಪಟ್ಟಿದ್ದು. ಜೀವಿಗಳು ಮಾಡಿಕೊಂಡಿರುವ ಅನಾದಿಯಾದ ಕರ್ಮಗಳಿಗೆ ಫಲವಾಗಿ ಈ ಲೀಲೆ ನಡೆಯುತ್ತದೆ.

ಭಕ್ತನು ಪರಮಾತ್ಮನನ್ನು ಪೂಜಾ ಜಪಾದಿಗಳಿಂದ ಆರಾಧಿಸುತ್ತಾನೆ. ಆ ಸಮಯದಲ್ಲಿ ಭಕ್ತನ ಚಿತ್ತವು ಏಕಾಗ್ರವಾಗಿ ಪರಮಾತ್ಮನಲ್ಲಿ ನೆಲೆಸಿರಬೇಕು. ನಿರ್ಗುಣನೂ ನಿರಾಕಾರನೂ ನಾಮರಹಿತನೂ ಆದವನಲ್ಲಿ ಚಿತ್ತವನ್ನು ನಿಲ್ಲಿಸುವುದು ನಮ್ಮಂತಹವರಿಂದ ಆಗತಕ್ಕದ್ದಲ್ಲ. ಯೋಗಿಗಳು ಮಾತ್ರ ನಿರ್ಗುಣ ಮಾನಸ ಪೂಜೆಯನ್ನು ಮಾಡಬಲ್ಲರು. ಆದ್ದರಿಂದ ಇತರ ಭಕ್ತರು ಪರಮಾತ್ಮನ ಸಗುಣಸ್ವರೂಪವನ್ನು ಮಾತ್ರ ಪೂಜಿಸಬಲ್ಲರು, ಧ್ಯಾನಿಸಬಲ್ಲರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ ಸಗುಣನಾದ ಈಶ್ವರನು ಭಕ್ತರ ಅಭಿರುಚಿಗೆ ಅನುಸಾರವಾಗಿ ವಿಭಿನ್ನರೂಪಗಳನ್ನು ಧರಿಸುತ್ತಾನೆ. ಅಥವಾ ಭಕ್ತರು ಆರಾಧನೆಗೋಸ್ಕರ ರೂಪವನ್ನೂ ಕಲ್ಯಾಣಗುಣಗಳನ್ನೂ ಕಲ್ಪಿಸಿಕೊಳ್ಳುತ್ತಾರೆ. ಈ ಸಗುಣ ಮೂರ್ತಿಯ ಪ್ರತೀಕವೇ ವಿಗ್ರಹ. ಆಗ ಬ್ರಹ್ಮ, ಶಿವ, ವಿಷ್ಣು, ಗಣೇಶ, ದುರ್ಗಾ, ಲಕ್ಷ್ಮೀ, ಸರಸ್ವತೀ - ಮೊದಲಾದ ದೇವತೆಗಳೂ ಅವರಿಗೆ ಗೊತ್ತಾದ ಆಕೃತಿ ಗಳೂ ಸಿದ್ಧವಾಗುತ್ತವೆ. ಈಶ್ವರನ ನಾನಾ ಗುಣಗಳನ್ನೂ ಕ್ರಿಯೆಗಳನ್ನೂ ಆಧರಿಸಿ ನಾಮಗಳೂ ಸಿದ್ಧವಾಗುತ್ತವೆ. ಈ ವಿಚಿತ್ರವಾದ ಅದ್ಭುತ ಜಗತ್ತನ್ನೇ ಸೃಷ್ಟಿಸಿದ ಈಶ್ವರನಿಗೆ ತಾನೊಂದು ರೂಪವನ್ನು ಧರಿಸಲು ಸಾಧ್ಯವಿಲ್ಲವೆ ? ಜೀವಿಗಳಂತೆ ತಾನೂ ಲೀಲಾರ್ಥವಾಗಿ ಕರ್ಮಗಳನ್ನು ಮಾಡಲಾರನೆ ? ಆತನ ಲೀಲಾವಿಭೂತಿ ಗಳನ್ನು ವರ್ಣಿಸತಕ್ಕದ್ದು ಸಹಸ್ರನಾಮ, ಸಹಸ್ರನಾಮಗಳಿಂದಲೂ ಪರಮಾತ್ಮನ ಮಹಿಮೆಯನ್ನು ವರ್ಣಿಸಿ ಮುಗಿಸಲಾರೆವು. ಈಶ್ವರನು ಪುರುಷದೇವತೆ, ಅವನ ಶಕ್ತಿ ಸ್ತ್ರೀದೇವತೆ.

ಈಗ ಸೌರ, ಗಾಣಪತ್ಯ, ಶಾಕ್ತ - ಮುಂತಾದ ಮತಗಳಿಲ್ಲ. ಶೈವ, ವೈಷ್ಣವ - ಎಂಬ ಎರಡು ಪಂಥಗಳು ಮಾತ್ರ ಪ್ರಸಿದ್ಧವಾಗಿವೆ. ಇವರಲ್ಲಿ ಕೆಲವರು ಶಿವನು ಅಧಿಕನೆಂದೂ ವಿಷ್ಣು ಅಧಿಕನೆಂದೂ ವಾದಿಸುತ್ತಾರೆ. ಈ ಭೇದಭಾವನೆಯು ಸರ್ವಥಾ ಯುಕ್ತವಾದದ್ದಲ್ಲ.

ವಿಷ್ಣುಪುರಾಣದಲ್ಲಿ -

ಸೃಷ್ಟಿಸ್ಥಿತ್ಯಂತಕರಣೀಂ ಬ್ರಹ್ಮವಿಷ್ಣುಶಿವಾತ್ಮಿಕಾಮ್ ।
ಸ ಸಂಜ್ಞಾಂ ಯಾತಿ ಭಗವಾನ್ ಏಕ ಏವ ಜನಾರ್ದನಃ ॥ (೧-೨-೬೬)

ಎಂದಿದೆ. "ಒಬ್ಬನೇ ಪರಮಾತ್ಮನು ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡತಕ್ಕವನಾಗಿ, ಕ್ರಮವಾಗಿ ಬ್ರಹ್ಮ, ವಿಷ್ಣು, ಶಿವ - ಎಂಬ ಸಂಜ್ಞೆಗಳನ್ನು ಪಡೆಯುತ್ತಾನೆ." ಇಂತಹ ನೂರಾರು ಮಾತುಗಳು ವಿಷ್ಣುಪುರಾಣದಲ್ಲಿ ಬಂದಿವೆ. ಅಂತೆಯೇ ಭಾಗವತದಲ್ಲಿ ಶಿವ-ವಿಷ್ಣುಗಳಿಗೆ ಅಭೇದವನ್ನು ಹೇಳುವ ನಾನಾ ವಚನಗಳಲ್ಲಿ ಇದೊಂದು -

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಣಮಯ್ಯಾ ಸ್ವಶಕ್ತ್ಯಾಸ್ಯ ಸರ್ಗಸ್ಥಿತ್ಯಪ್ಯಯಾನ್ ವಿಭೋ ।
ಧತ್ಸೇ ಯದಾ ಸ್ವದೃಗ್ ಭೂಮನ್ ಬ್ರಹ್ಮವಿಷ್ಣುಶಿವಾಭಿಧಾಮ್ ॥
(೮-೭-೨೩)

"ಹೇ ವಿಭುವೆ, ಭೂಮನೆ, ಸ್ವತಃಸಿದ್ಧಜ್ಞಾನನಾದ ನೀನು ಈ ಜಗತ್ತಿನ ಸರ್ಗಸ್ಥಿತಿ ಪ್ರಳಯಗಳನ್ನು ನಡೆಸುವಾಗ ಗುಣಮಯವಾದ ಸ್ವಶಕ್ತಿಯಿಂದ ಬ್ರಹ್ಮ, ವಿಷ್ಣು, ಶಿವ ಎಂಬ ಹೆಸರನ್ನು ಧರಿಸುತ್ತೀಯೆ" ಎಂದರ್ಥ. ಇದು ಶಿವನ ಸ್ತುತಿ. ವಿಭೋ ಎಂದರೆ ಹೇ ಶಿವನೆ - ಎಂದರ್ಥ. ಹರಿಹರರಲ್ಲಿ ಭೇದವನ್ನು ಕಲ್ಪಿಸಿ ಒಬ್ಬರನ್ನೊಬ್ಬರು ನಿಂದಿಸತಕ್ಕವರು ಇದರಿಂದ ಏನಾದರೂ ಪಾಠವನ್ನು ಕಲಿತುಕೊಂಡಾರು.

ಪ್ರಕೃತದಲ್ಲಾದರೋ ವಿಷ್ಣುವಿನ ಅವತಾರನಾದ ಶ್ರೀಕೃಷ್ಣನ ಲೀಲಾ ವಿಸ್ತರವೂ ಮಹಿಮೆಯೂ ಮಹಾಭಾರತದಲ್ಲಿ ವರ್ಣಿತವಾಗಿದೆ. ಭೀಷ್ಮ ಮತ್ತು ಯುಧಿಷ್ಠಿರ - ಇಬ್ಬರೂ ಕ್ಷತ್ರಿಯರು. ಕ್ಷತ್ರಿಯರ ದೇವತೆ ವಿಷ್ಣು. ಯುಧಿಷ್ಠಿರನು ರಾಜ್ಯಪಾಲನೆಯೆಂಬ ಸ್ಥಿತಿಯನ್ನು ಧರ್ಮದಿಂದ ನಡೆಸಬೇಕಾಗಿದೆ. ಸ್ಥಿತಿಯ ಕರ್ತನೇ ವಿಷ್ಣು. ಅಲ್ಲದೆ ಎದುರಿಗೆ ಶ್ರೀಕೃಷ್ಣನೇ ಪ್ರತ್ಯಕ್ಷವಾಗಿ ನಿಂತಿದ್ದಾನೆ. ಅಲ್ಲದೆ ಭಕ್ತರೆಲ್ಲರಿಗೂ ಸ್ಥಿತಿಯ ಚಿಂತೆಯೇ ಕಾಡುತ್ತದೆ. ಸ್ಥಿತಿ ಕಾಲವೇ ಸಂಸಾರಬಂಧನದ ವಿವಿಧಕ್ಲೇಶಗಳ ಆಕರ. ಆದ್ದರಿಂದ ವಿಷ್ಣುವನ್ನು ಸ್ತುತಿಸುವ ಸಹಸ್ರನಾಮಗಳನ್ನು ಭೀಷ್ಮನು ಹೇಳಿರುವುದು ಅತ್ಯಂತ ಸಂಗತವಾಗಿದೆ. ಮೋಕ್ಷಧರ್ಮಪರ್ವದಲ್ಲಿ ಭೀಷ್ಮನೇ ಶಿವಸಹಸ್ರನಾಮವನ್ನು ಹೇಳಿದ್ದಾನೆಂಬುದನ್ನು ಗಮನಿಸಬೇಕು. ಇರಲಿ.

ಜಪವೆಂದರೆ ಪವಿತ್ರವಾದ ದೇವನಾಮವನ್ನೋ ವೇದಮಂತ್ರವನ್ನೋ ಮತ್ತೆ ಮತ್ತೆ ಏಕಾಗ್ರಚಿತ್ತನಾಗಿ ಉಚ್ಚರಿಸುವುದು. ಇದು ವಾಚಿಕ, ಉಪಾಂಶು, ಮಾನಸಿಕ - ಎಂದು ಮೂರು ವಿಧ. ಇತರರಿಗೆ ಕೇಳುವಂತೆ ಗಟ್ಟಿಯಾಗಿ ಉಚ್ಚರಿಸುವುದು ವಾಚಿಕ. ತುಟಿಗಳನ್ನು ಮೆಲ್ಲಗೆ ಅಲ್ಲಾಡಿಸುತ್ತಾ ತನಗೆ ಮಾತ್ರ ಕೇಳುವಂತೆ ಸೂಕ್ಷ್ಮವಾಗಿ ಅಕ್ಷರಗಳನ್ನು ಉಚ್ಚರಿಸಿಕೊಳ್ಳುವುದು ಉಪಾಂಶು,

Sri Vidyabharathi Book Centre, Sringeri

CC-O. In Public Domain. Digitized by eGangotri

ಮನಸ್ಸಿನಲ್ಲಿಯೇ ಜಪಿಸಿಕೊಳ್ಳುವುದು ಮಾನಸ ಜಪ. ಮೂರು ಬಗೆಯ ಜಪಗಳಲ್ಲಿಯೂ ಚಿತ್ತವು ಉಪಾಸ್ಯದೇವತೆಯಲ್ಲಿ ನೆಟ್ಟಿರಬೇಕು. ಮನಸ್ಸು ಎಲ್ಲಿಗೂ ಹೋಗದಂತೆ ತಡೆದು ವಿಷ್ಣುವಿನ ಒಂದು ಆಕೃತಿಯಲ್ಲಿಯೇ ನೆಟ್ಟು ಆತನ ಮಹಿಮೆಯನ್ನು ಧ್ಯಾನಿಸುತ್ತಿರಬೇಕು. ಕಣ್ಣಿಗೆ ಭಗವನ್ಮೂರ್ತಿಯೇ ಎದುರಿಗೆ ನಿಂತಿದೆಯೋ ಎಂಬಂತೆ ಕಾಣುತ್ತಿರಬೇಕು. ಸಹಸ್ರನಾಮಗಳಲ್ಲಿ ಒಂದೊಂದು ನಾಮದ ಅರ್ಥವೂ ತಿಳಿದಿದ್ದರೆ ಅತ್ಯುತ್ತಮ. ಆಗ ಆ ನಾಮದಿಂದ ಪ್ರತಿಪಾದ್ಯವಾದ ಭಗವಂತನ ಮಹಿಮೆಯು ಸ್ಮರಣೆಗೆ ಬರುತ್ತಾ ಹೋಗುವುದು. ಒಂದೊಂದು ಪದದ ಅರ್ಥವು ತಿಳಿಯದಿದ್ದರೂ ಇದೆಲ್ಲವೂ ಭಗವಂತನ ನಾಮವೆಂದು ತಿಳಿದಿರುತ್ತದೆಯಷ್ಟೆ. ಅಷ್ಟಾದರೂ ಸಾಕು, ಅದಕ್ಕೆ ಒಳ್ಳೆಯ ಫಲವಿದೆ.

ಧ್ಯಾಯನ್ ಕೃತೇ ಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್ ॥

ಎಂದು ವಿಷ್ಣುಪುರಾಣವು ಹೇಳಿದೆ (೬-೨-೧೭). ''ಕೃತಯುಗದಲ್ಲಿ ವಿಷ್ಣುವನ್ನು ಧ್ಯಾನಿಸುತ್ತ ತಪಸ್ಸು ಮಾಡುವುದರಿಂದ, ತ್ರೇತಾಯುಗದಲ್ಲಿ ಯಜ್ಞಗಳನ್ನು ಆಚರಿಸುವುದರಿಂದ, ದ್ವಾಪರಯುಗದಲ್ಲಿ ಅರ್ಚನೆ ಮಾಡುವುದರಿಂದ ಯಾವ ಪುಣ್ಯವು ಲಭಿಸುತ್ತದೆಯೋ ಅದನ್ನು ಕಲಿಯುಗದಲ್ಲಿ ನಾಮಕೀರ್ತನ ಮಾತ್ರದಿಂದ ಮಾನವನು ಪಡೆಯುತ್ತಾನೆ'' ಎಂದು ಇದರ ತಾತ್ಪರ್ಯ. ಕಲಿಯುಗದಲ್ಲಿ ಅಲ್ಪಾಯಾಸದಿಂದ ಅತಿಶಯವಾದ ಫಲವು ಲಭಿಸುತ್ತದೆ ಎಂಬುದು ಕಲಿಯುಗದ ಮಹಿಮೆ. ಆಪದ್ಧರ್ಮವನ್ನು ಧರ್ಮಶಾಸ್ತ್ರವು ಹೇಗೆ ಸಂಕೋಚಗೊಳಿಸಿದೆಯೋ ಹಾಗೆ ಯುಗಧರ್ಮಾನುಸಾರವಾಗಿ ಶ್ರೇಯೋಮಾರ್ಗವನ್ನು ಋಷಿಗಳು ಸುಲಭಗೊಳಿಸಿದ್ದಾರೆ. ಭೀಷ್ಮನು ಧರ್ಮರಾಜನಿಗೆ ಧರ್ಮೋಪದೇಶವನ್ನು ಮಾಡುವಾಗ ಕಲಿಯುಗದ ಆರಂಭವು ಸಮೀಪಿಸಿತ್ತು. ಆದ್ದರಿಂದಲೇ ವ್ಯಾಸರು ಭೀಷ್ಮನಿಂದ ವಿಷ್ಣುಸಹಸ್ರನಾಮದ ಜಪವನ್ನು ಲಕ್ಷಿಸಿ -

ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋಮತಃ ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಿಸಿದ್ದಾರೆ. ''ಈ ನಾಮಜಪವು ಸರ್ವಶ್ರೇಯೋ ಮಾರ್ಗಗಳಲ್ಲಿ ದೊಡ್ಡ ದೆಂದು ನನ್ನ ಅಭಿಪ್ರಾಯ'' ಎಂದರ್ಥ. ತಪಸ್ಸು ಅತ್ಯಂತ ಕಠಿಣವಾದದ್ದು. ಯಜ್ಞವು ಬಹಳ ಹಣವನ್ನೂ ಜನರ ಸಹಾಯವನ್ನೂ ದೇಶಕಾಲಾದಿ ವ್ಯವಸ್ಥೆ ಯನ್ನೂ ಬಯಸುತ್ತದೆ. ಅರ್ಚನೆಯೂ ಸುಲಭವಲ್ಲ. ಪೂಜನೀಯವಾದ ಪ್ರತಿಮೆ, ಹೂ ಹಣ್ಣು ಮೊದಲಾದ ಸಾಮಗ್ರಿ, ಸ್ಥಳ - ಮುಂತಾದ ವಸ್ತುಗಳು ಬೇಕಾಗುತ್ತವೆ. ಜಪಯಜ್ಞಕ್ಕೆ ಇವು ಯಾವುವೂ ಬೇಕಾಗಿಲ್ಲ. ಮೂರು ಕಾಸಿನ ಖರ್ಚಿಲ್ಲ. ಸ್ನಾನ ಮಾಡಿಯೇ ಜಪಿಸಬೇಕೆಂಬ ನಿಯಮವು ಕೂಡ ಇಲ್ಲ. ಹಗಲು ರಾತ್ರಿಗಳಲ್ಲಿ ಯಾವಾಗಲಾದರೂ ಮಾಡಬಹುದು. ಮುಹೂರ್ತವನ್ನು ನೋಡ ಬೇಕಾಗಿಲ್ಲ. ಗಂಡಸರೂ, ಹೆಂಗಸರು, ಸರ್ವರೂ ನಾಮಜಪವನ್ನು ಮಾಡ ಬಹುದು. ಜಾತಿಯ ನಿಯಮ ಸಹ ಇಲ್ಲ. ಸಕಲ ಜಾತಿಯವರೂ ಭಗವನ್ನಾಮ ಗಳನ್ನು ಜಪಿಸಬಹುದು. ಇಷ್ಟು ಸುಲಭವಾದದ್ದು ಜಪಯಜ್ಞ. ಇಷ್ಟು ಸುಲಭ ವಾದ ಮಾರ್ಗವನ್ನು ತೋರಿಸಿದರೂ ಸಹ ಜನರು ನಾಮಜಪದಲ್ಲಿಯೂ ಆಸಕ್ತಿ ಯನ್ನಾಡದಿರುವುದೊಂದು ಶೋಚನೀಯವಾದ ಸಂಗತಿ.

ಭಗವಾನ್ ವ್ಯಾಸಮುನಿಗಳು ಹೇಳುತ್ತಾರೆ.

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥

ಸರ್ವಶಾಸ್ತ್ರಗಳನ್ನೂ ತಳಮುಟ್ಟಿ ಶೋಧಿಸಿದ್ದಾಯಿತು. ಮತ್ತೆಮತ್ತೆ ವಿಚಾರಮಾಡಿದ್ದಾಯಿತು. ಕಡೆಯ ಸಿದ್ಧಾಂತವಿಷ್ಟೆಂದು ನಿರ್ಣಯವಾಯಿತು. ಏನೆಂದರೆ, ''ಶ್ರೀಮನ್ನಾರಾಯಣನನ್ನು ಸದಾ ಧ್ಯಾನಿಸುತ್ತಿರಬೇಕು'' ಎಂದು. ಯಜ್ಞಗಳಲ್ಲಿ ಜಪಯಜ್ಞವೇ ಶ್ರೇಷ್ಠವೆಂದು ತಿಳಿಸುವುದಕ್ಕಾಗಿ ಭಗವಂತನು ''**ಯಜ್ಞಾನಾಂ ಜಪಯಜ್ಞೋಽಸ್ಮಿ**'' ಎಂದು ಭಗವದ್ಗೀತೆಯಲ್ಲಿ ನುಡಿದಿದ್ದಾನೆ. ''ಯಃ ಸ್ಮರೇತ್ ಪುಂಡರೀಕಾಕ್ಷಂ ಸಬಾಹ್ಯಾಭ್ಯಂತರಃ ಶುಚಿಃ'' - ಯಾವಾತನು ಪುಂಡರೀಕನೇತ್ರನಾದ ಮಹಾವಿಷ್ಣುವನ್ನು ಸ್ಮರಿಸುತ್ತಾನೋ ಅವನು ಬಾಹ್ಯ ದಲ್ಲಿಯೂ ಶುಚಿ. ಹೃದಯದಲ್ಲಿಯೂ ಶುಚಿ''.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಚ್ಯುತಾನಂತ ಗೋವಿಂದ ನಾಮೋಚ್ಚಾರಣ ಭೇಷಜಾತ್ ।
ನಶ್ಯಂತಿ ಸಕಲಾ ರೋಗಾಃ ಸತ್ಯ ಸತ್ಯಬ್ರವೀಮ್ಯಹಮ್ ॥

ಎಂಬ ಇನ್ನೊಂದು ಪ್ರಾಚೀನ ಶ್ಲೋಕವಿದೆ. "ಅಚ್ಯುತ, ಅನಂತ, ಗೋವಿಂದ - ಎಂಬ ಮೂರು ಭಗವನ್ನಾಮಗಳನ್ನು ಉಚ್ಚರಿಸುವುದೇ ಒಂದು ಔಷಧ. ಈ ಔಷಧದಿಂದ ಸಕಲರೋಗಗಳೂ ನಶಿಸುತ್ತವೆ. ಇದು ಸತ್ಯ ಈ ಸತ್ಯವನ್ನೇ ಮತ್ತೆ ಮತ್ತೆ ನಾನು ಹೇಳುತ್ತೇನೆ." ಎಷ್ಟು ದೃಢವಾದ ವಿಶ್ವಾಸವಿದೆ ಇದನ್ನು ಹೇಳಿದವರಿಗೆ ಎಂಬುದು ಗಮನಾರ್ಹವಾದದ್ದು.

ಆದರೆ ಇದೆಲ್ಲವೂ ಭಗವಂತನಲ್ಲಿ ದೃಢವಾದ ಭಕ್ತಿಯಿದ್ದರೆ ಮಾತ್ರ ಫಲಿಸುತ್ತದೆ. ಪರಮಾತ್ಮನಲ್ಲಿ ಚಿತ್ತವು ಏಕಾಗ್ರವಾಗಿ ನಿಲ್ಲುವುದು ಭಕ್ತಿ. ಅದು ಪರಮಪ್ರೇಮರೂಪವೆಂದು ನಾರದಭಕ್ತಿಸೂತ್ರವು ಹೇಳುತ್ತದೆ. ಇದನ್ನೇ ವಿವರಿಸುತ್ತ ಮಧುಸೂದನ ಸರಸ್ವತಿಗಳು ಭಕ್ತಿರಸಾಯನವೆಂಬ ಗ್ರಂಥದಲ್ಲಿ -

ದ್ರುತಸ್ಯ ಭಗವದ್ಧರ್ಮಾತ್ ಧಾರಾವಾಹಿಕತಾಂ ಗತಾ ।
ಸರ್ವೇಶೇ ಮನಸೋ ರಕ್ತಿಃ ಭಕ್ತಿರಿತ್ಯಭಿಧೀಯತೇ ॥ ಎಂದಿದ್ದಾರೆ.

"ಭಗವಂತನಲ್ಲಿರುವ ಕಲ್ಯಾಣಗುಣಗಳನ್ನು ನೆನೆದು ನಮ್ಮ ಚಿತ್ತವು ಕರಗಿ ಹೋದಂತಾಗಬೇಕು. ಕರಗಿದ ಆ ಚಿತ್ತವು ಸರ್ವೇಶ್ವರನಲ್ಲಿ ನೆಟ್ಟುಹೋದರೆ ಭಕ್ತಿ ಎನಿಸುತ್ತದೆ" ಎಂದು ತಾತ್ಪರ್ಯ. "ಯಥಾ ಗಂಗಾಂಭಸೋಽಂಬುಧೌ" ಎಂದು ಅವರೇ ಹೇಳುತ್ತಾರೆ. ಹೇಗೆ ಗಂಗಾಪ್ರವಾಹವು ಸಮುದ್ರದಲ್ಲಿ ಏಕಪ್ರಕಾರವಾಗಿ ತಡೆಯಿಲ್ಲದೆ ಬೀಳುತ್ತಿರುವುದೋ ಹಾಗೆ ಕರಗಿದ ಈ ಚಿತ್ತವು ಭಗವಂತನಲ್ಲಿ ನಿರಂತರವಾಗಿ ನಿಂತಿರಬೇಕು. ಅದು ಭಕ್ತಿ.

'ಭಕ್ತ್ಯಾ ಮಾಮಭಿಜಾನಾತಿ' ಎಂದು ಭಗವದ್ಗೀತೆಯಲ್ಲಿ ಹೇಳಿದಂತೆ ಭಕ್ತಿಯು ಚಿತ್ತಶುದ್ಧಿದ್ವಾರಾ ಆತ್ಮಜ್ಞಾನಕ್ಕೆ ಕಾರಣವಾಗುತ್ತದೆ. ಆತನಿಗೆ ಶರಣಾದರೆ ಸರ್ವವಿಧದಲ್ಲಿಯೂ ಭಕ್ತನನ್ನು ಮೇಲೆತ್ತುವುದು ನನ್ನ ಹೊಣೆ ಎಂದೂ ನನ್ನ ಭಕ್ತನು ಎಂದಿಗೂ ಕೆಡುವುದಿಲ್ಲವೆಂದೂ ಕರುಣಾಳುವಾದ ಶ್ರೀಕೃಷ್ಣನು "ಕೌಂತೇಯ, ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ" ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತುಕೊಟ್ಟಿದ್ದಾನೆ. ಈ ಸಹಸ್ರನಾಮಾವಳಿಯ ಫಲಶ್ರುತಿಯಲ್ಲಿಯೂ "ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್" ಎಂದು ನಿಶ್ಚಯೋಕ್ತಿ ಇದೆ. ಈ ನಾಮಾವಳಿಯನ್ನು ಪಠಿಸತಕ್ಕ ಎಲ್ಲ ವರ್ಣದವರೂ ತಮಗೆ ಇಷ್ಟವಾದ ಫಲವನ್ನು ಪಡೆಯುತ್ತಾರೆ. ಬ್ರಾಹ್ಮಣನು ಆತ್ಮಜ್ಞಾನವನ್ನು ಬಯಸುವುದರಿಂದ ವೇದಾಂತದಲ್ಲಿ ನಿಷ್ಣಾತನಾಗುವನು. ಕ್ಷತ್ರಿಯನು ಶತ್ರುಗಳ ಮೇಲೆ ವಿಜಯವನ್ನೇ ಸಾಧಿಸುವನು. ವೈಶ್ಯನಿಗೆ ಸಮೃದ್ಧವಾಗಿ ಧನಲಾಭವಾಗುವುದು. ಶೂದ್ರನು ಎಲ್ಲ ಬಗೆಯಲ್ಲಿಯೂ ಸುಖಿಯಾಗುವನು ಎಂದು ಹೇಳಿದೆ. ಇದರಿಂದ ಜಾತಿಭೇದವಿಲ್ಲದೆ ಎಲ್ಲರೂ ಸಹಸ್ರನಾಮವನ್ನು ಪಠಿಸಬಹುದೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಈ ವಿಷ್ಣುಸಹಸ್ರನಾಮ ಸ್ತೋತ್ರವು ಸರ್ವೋತ್ತಮವಾದ ಶ್ರೇಯಃ ಸಾಧನವೆಂದು ಸಿದ್ಧವಾಯಿತು. ಅಲ್ಲದೆ ಅತ್ಯಂತ ಸುಲಭವಾದ ಮಾರ್ಗವಿದು. ಇದನ್ನು ಕೆಲವು ದಿನ ಪಠಿಸುತ್ತಿದ್ದರೆ ಕಂಠಪಾಠವಾಗಿ ಬಿಡುತ್ತದೆ. ಈ ಶ್ಲೋಕಗಳೆಲ್ಲವನ್ನೂ ಹೇಳಿಕೊಳ್ಳಲು ಸುಮಾರು ಹದಿನೈದು ನಿಮಿಷಗಳು ಸಾಕು. ಯಾವ ಫಲಾಪೇಕ್ಷೆಯೂ ಇಲ್ಲದೆ ಏಕಾಂತದಲ್ಲಿ ಕುಳಿತು ಏಕಚಿತ್ತದಿಂದ ಈ ನಾಮಗಳನ್ನು ಜಪಿಸಬೇಕು. ಯಾವ ಉದ್ಯೋಗದವರೇ ಆಗಲಿ, ಎಷ್ಟೇ ನಿಬಿಡವಾದ ಕೆಲಸಗಳನ್ನು ಮಾಡತಕ್ಕವರೇ ಆಗಲಿ, ಹೆಂಗಸಾಗಲಿ, ಗಂಡಸಾಗಲಿ - ದಿನದಲ್ಲಿ ಹದಿನೈದು ನಿಮಿಷಗಳ ಅವಕಾಶವು ಸಿಗುವುದಿಲ್ಲವೇನು ? ಸಿಗುವುದಿಲ್ಲವೆನ್ನುವುದು ಸುಳ್ಳು. ಏಕಾಗ್ರಚಿತ್ತದಿಂದ ಭಗವಂತನನ್ನು ನೆನೆಯುತ್ತ ಹದಿನೈದು ನಿಮಿಷಗಳನ್ನು ಕಳೆದರೆ ಮನಸ್ಸಿಗೆ ಎಷ್ಟು ಶಾಂತಿಯೂ ಹರ್ಷವೂ ಉತ್ಸಾಹವೂ ಲಭಿಸುವುದೆಂಬುದನ್ನು ಅನುಭವಿಸಿಯೇ ತಿಳಿಯಬೇಕು. ದೇವರಿಲ್ಲವೆಂಬ ದುರ್ವಾದಕ್ಕಾಗಲಿ, ಶಿವನು ಅಧಿಕ - ವಿಷ್ಣು ಅಧಿಕ - ದುರ್ಗಾಪರಮೇಶ್ವರಿ ಅಧಿಕ - ಎಂಬ ಭ್ರಾಂತಿಗಾಗಲಿ ಒಳಗಾಗದೆ ಸರ್ವರೂ ವಿಷ್ಣುಸಹಸ್ರನಾಮವನ್ನು ಜಪಿಸಿ ಕೃತಾರ್ಥರಾಗಲೆಂದು ಹಾರೈಸೋಣ. ಶುಭಮಸ್ತು.

☆☆☆

Sri Vidyabharathi Book Centre, Sringeri

CC-O. In Public Domain. Digitized by eGangotri

The Glory of VISHNU SAHASRANAMA

- Dr. P.S. Narayana Rao

Sri Vishnu Sahasranama, as a Parayana stotra, is held in great veneration throughout India from Kashmir to Kanyakumari. The greatest speciality of this stotra is that it is recited by person of all ranks and stations in life, "by the prince and the peasant, by the ignorant devotee and the fortunate yogin on every occasion of joy or sorrow". The reason is that miraculous virtues are attributed to it and are guaranteed by the author sage Vyasa himself. No wonder Kanchi Paramacharya Swamigal described Vishnu Sahasranama as the vajra kavach i.e., an armour of diamond which is so strong as to protect the devotees against difficulties confronting them. Actually, it is confirmed by a considerable number of devotees that even a mere recitation of the stotra without knowing one meaning of each name of the Lord in it, can confer upon the reader the desired benefits. So, greater will be the merits if one recites the stotra with a thorough knowledge of the meaning of every nama in the stotra.

The inestimable value of this great stotra can be assessed by the fact that it was given as an upadesha mantra to Yudhishtira by the great sage Bhishmacharya.

When Yudhishtira went to meet Bhishmacharya who was dying on a bed of arrows waiting for his death in uttarayana, a significant dialogue took place between the two. Yudhishtira put

Sri Vidyabharathi Book Centre, Sringeri

CC-O. In Public Domain. Digitized by eGangotri

a number of questions to Bhishma of which the most important one was "Who is the supreme deity in the universe ? What is the sole and supreme goal ? Whom should men praise and worship to attain Moksha ?"

In reply to this question Bhishma stated that "by always praising Lord Vishnu who is without beginning and end, who is the supreme Lord of all the universe and who is the observer of the universe, one gets beyond all grief ". In his well known commentary on Vishnu Sahasranama, Sri Shankaracharya stated that by realizing Lord Vishnu the .... of the heart break off as said in the Mundaka upanishad. It means all the karmas of the devotee perish when he is seen who is the cause and effect of the entire universe. With this conviction, sage Bhishma regards the recitation of Vishnu Sahasranama as the greatest of all Dharmas. This Japa can be conducted without troubling others. As to the efficacy of this stotra, the Vishnu Purana states, "that which one obtains in kritayuga by meditation, by performing sacrifices in the Treta, by worship in Dwapara, the sadhakas receive in the kaliyuga by reciting the names of Keshava". Then, the Bhagavad Gita declares, "of sacrifice, I am the Japa sacrifice".

As to how this Japa prepares one for the ultimate salvation, the Vishnupurana states, "the repetition of the Lord's name with devotion, purifies one by cleansing him of all his sins, as the fire purifies the metals". The resulting Chitta shuddhi enables the Sadhaka to attain liberation. The Vishnu Purana further states "The man who fixes his mind on Vishnu goes not to hell ; the Lord confers upon the devotee, eternal freedom". The hell

Sri Vidyabharathi Book Centre, Sringeri

CC-O. In Public Domain. Digitized by eGangotri

mentioned here refers to cycle of birth and death beyond which one goes by attaining Moksha.

Referring to the various benefits, apart from the ultimate salvation, accruing to the credit of the devotee, the scriptures state : "Hari who grants emancipation also bestows upon him beauty, health, wealth and continuous worldly happiness".

The greatness of Lord Vishnu has thus been extorted by Bhishma :

ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥

The purest of the pure, the Most Beneficent of the beneficent, the god of god, the imperishable father of all beings.

Hari truly grants emancipation besides bestowing on the devotee beauty, health, wealth and continuous worldly happiness.

But as the devotee progresses in spirituality, and through the Lord's grace, stops hankering for worldly happiness and pleasures and desires increasingly for Moksha. The sincere devotee who surrenders at the feet of Lord Narayana gradually overcomes ahankara and mamakara. The state of total desirelessness for worldly gifts will be attained by him. This is really the highest spiritual elevation man can aspire for.

Sri Sai Baba of Shirdi referred to this development of the Sadhaka when he spoke of the value and efficiency of Vishnu Sahasranama. He said, "I had once heart disease. I kept Vishnu Sahasranama on my chest. Hari descended from it and entered my heart and I was cured of my disease". This reference to the

Sri Vidyabharathi Book Centre, Sringeri

CC-O. In Public Domain. Digitized by eGangotri

cure of the heart disease is true from a worldly point of view through the Lord's grace. But it has a spiritual connotation. Heart disease referred to here means our worldly bondage which will be removed by keeping the thought of the Lord in our heart, i.e., by constantly meditating on the Lord. Ultimately, the Sadhaka will attain Mukti.

Sadguru Sai Padananda Sri Radha Krishna Swamiji, who was well-known for his adoration of Lord Vishnu made a pointed reference to Shri Sai Baba's utterances on Vishnu Sahasranama and said, "he who after purifying himself, recites Vishnu Sahasranama every day with devotion and perseverance and with his heart wholly turned towards him, acquires fame and eminence amongst his kinsmen, enduring prosperity and moksha as well, which is the most precious of all gifts.

Let us conclude with this prayer by Sri Sai Padananda Sri Radhakrishna Swamiji.

"Tad Vishnoh Paramam Padam" Adoration to Sri Vedavyasa, the compiler of Vishnu Sahasranama and to Lord Vishnu.

☆☆☆

Sri Vidyabharathi Book Centre, Sringeri

CC-O. In Public Domain. Digitized by eGangotri

श्री विष्णुसहस्रनाम की महिमा

- प्रो. एस्. श्रीकण्ठमूर्ति

विश्वसाहित्य मे वेदव्यास कृत महाभारत का इक विशिष्ट और उन्नत स्थान है । सर्वमान्य, लवलेशदोषरहित तथा वचनसौष्ठव से युक्त महाभारत के बारे में वायुपुराण में कहा गया है -

"मतिमंथानमाविध्य येनासौ श्रुतिसागरात् ।
जगद्धिताय जनितो महाभारत चन्द्रमाः ।।"

(बुद्धि रूपी मथनी के सहारे वेद रूपी सागर को मथने पर जग-हित करनेवाला महाभारत रूपी चन्द्रमा उत्पन्न हुआ ।)

उसी प्रकार मत्स्यपुराण, विष्णुपुराण, मार्कण्डेयपुराण आदि में पराशरपुत्र वेदव्यास द्वारा महाभारत के रचे जाने का वर्णन है ।

महाभारत में कुरु वंश के राज-परिवारों की कथाओं और घटनाओं के साथ-साथ अन्य सामान्य लोगों के लिए हितकारक, तथा धर्म, अर्थ, काम और मोक्षादि चतुर्विध पुरुषार्थ फल प्रदान करनेवाले अनेक विवरण दिये गये है । विष्णुधर्मोत्तर पुराण में वर्णित पञ्चरत्नों में वामनपुराण में वर्णित गजेन्द्रमोक्ष को छोड अन्य चारों रत्न महाभारत में आये है ।

"गीता सहस्रनामैव स्तवराजो ह्यनुस्मृतिः ।
गजेन्द्रमोक्षणं चैव पञ्चरत्नानि भारते ।।"

Sri Vidyabharathi Book Centre, Sringeri

CC-O. In Public Domain. Digitized by eGangotri

इस प्रकार भगवद्गीता, विष्णुसहस्रनाम, भीष्मस्तवराज तथा अनुस्मृतिस्तोत्रं - ये चारों महाभारत के अन्तर्गत पाये जाते हैं ।

कुरुक्षेत्र सङ्ग्राम मे यद्यपि पाण्डव विजयी हुए तो भी धर्मराज युधिष्ठिर अपने निकटतम बन्धुओ की हत्या से खिन्न हुए तो वेदव्यास ने उनसे कहा -

"श्रोतुमिच्छसि चेद्धर्मान्निखिलेन नराधिप ।
प्रैहि भीष्मं महाबाहो वृद्धं कुरु पितामहम् ।"

- सर्वधर्म को जानना चाहते हो, कुरुवंश भूषण भीष्म पितामह के पास जाओ ।"

तब युधिष्ठिर वयोवृद्ध एंव ज्ञानवृद्ध भीष्म पितामह के पास गये और उनसे श्रृतिस्मृत्यादि चोदनालक्षणयुक्त, अभ्युदयनिःश्रेयस फलवाले राजधर्म, मोक्षधर्म, दानधर्म आदि विविध धर्मों के बारे में जानलिया और फिर -

"श्रुत्वा धर्मानशेषेण पावनानि च सर्वशः ।
युधिष्ठिर शान्तनवं पुनरेवाभ्यभाषत ।।"

भीष्म पितामह के सामने निम्नलिखित छः प्रश्न प्रस्तुत किये -

1. 'किमेकं दैवतं लोके ?" (सर्वश्रेष्ठ देवता कौन है ?)
2. "किं वाचिके परायणं ?" (उच्चतम लक्ष्य कौन-सा है ?)
3. "स्तुवन्तुं कः मानवाः शुभ प्राप्युयुः ?" (शुभ प्राप्ति के लिए किस देवता की पूजा करनी है ?)

Sri Vidyabharathi Book Centre, Sringeri

CC-O. In Public Domain. Digitized by eGangotri

4. "किं अर्चितं प्राप्नुयुर्मानवाः शुभम् ?" (किस देवता के नामों का जप करना है ?)

5. "को धर्मः सर्वधर्माणां भवतः परमो मतः ?" (आपकी राय में श्रेष्ठ धर्म कौनसा है ?)

6. "किं जपन्मुच्यते जन्तुः संसार बन्धनात् ?" (मानव को संसार बन्धन से मुक्त करनेवाला साधन कौनसा है ?)

उपयुक्त प्रश्नों में प्रत्येक प्रश्न के साथ "लोके" (लोक में) तथा "भवतः परमो मतः" (आपकी साथ में) जोडना उचित लगता है ।

युधिष्ठिर के ये प्रश्न केवल उन्ही के नहीं है, अपि तु आज भी हम-जैसे संसार-सागर में पडे हुए आर्ता, विषण्णा लोगों के प्रश्न है । जिनके उत्तर पाकर इस संसार से मुक्त होने की अभिलाषा रखते है ।

भीष्माचार्य ने इन प्रश्नों का उत्तर दिया -

पहले प्रश्न का उत्तर -

"पवित्राणां पवित्रं यो मङ्गलानां च मङ्गलम् ।
दैवतं देवतानां च भूतानां योऽव्ययः पिता ।।"

(जो पवित्रो में पवित्र है, मङ्गलकारको में मङ्गल है, देवताओं के देवता है तथा भूतों के अव्यय पिता है, वही इस लोक में सर्वश्रेष्ठ देवता है ।)

दूसरे प्रश्न का उत्तर -

Sri Vidyabharathi Book Centre, Sringeri

CC-O. In Public Domain. Digitized by eGangotri

"परमं यो महत्तेजः परमं यो महत्तपः ।
परमं यो महद्ब्रम्ह परमं यो परायणम् ।।

(जो परम तेजोयुक्त है, जो परम तप है, जो परम महाब्रम्ह है, जो परम परायण है, वही सब का उच्चतम लक्ष्य है ।)

तीसरे प्रश्न का उत्तर -

"अनादिनिधनं विष्णुं सर्वलोकमहेश्वरम् ।
लोकाध्यक्षं स्तुवन्नित्यं सर्व दुःखतिगो भवेत् ।।

(अनादि, अनन्त, सर्वलोक महेश्वर तथा लोकाध्यक्ष विष्णु की, प्रतिदिन, स्तुति करते रहने से मानव सर्व दुःखातीत बन जाता है ।)

चौथे प्रश्न का उत्तर -

"तमेव चार्चयन्नित्यं भक्त्या पुरुषमव्ययम् ।
ध्यायन्, स्तुवन्, नमस्यंश्च यजमानस्तमेव च ।।

(उसीकी अर्चना करते हुए उस अव्यय पुरुष का, प्रतिनित्य ध्यान करते हुए, स्तुति करते हुए, नमस्कार करते हुए, तथा पूजा करते हुए, रहने से सकल शुभ प्राप्त होंगे ।)

पाञ्चवे प्रश्न का उत्तर -

''एष मे सर्वधर्माणां धर्मोऽधिकतमो मतः ।
यद् भक्त्या पुण्डरीकाक्षं स्तवैरर्चेन्नरः सदा ।।

Sri Vidyabharathi Book Centre, Sringeri

CC-O. In Public Domain. Digitized by eGangotri

(मानव का, भवित से पुण्डरीकाक्ष की, सदा स्तोत्रों द्वारा अर्चना करना ही, मेरी दृष्टि से सब धर्मों से श्रेष्ठ धर्म है ।)

छटे प्रश्न का उत्तर -

"तस्य लोक प्रधानस्य जगन्नाथस्य भूपते ।
विष्णोर्नाम सहस्रं में शृणु पाप भयावहम् ।।

(हे राजा, सुनो, पाप और भय से मुक्त करनेवाले उस लोक प्रधान, जगन्नाथ विष्णु के सहस्रनामों को सुनो जिनके सुनने से मानव इस संसार बन्धन से मुक्त हो जा सकेगा ।)

तब भीष्म पितामह विष्णु सहस्रनामों को प्रस्तुत करते है ।

यह 'विष्णुसहस्रनाम' वेदव्यास कृत महाभारत के अनुशासन पर्व में उपलब्धं है । इस महामन्त्रशास्त्र विष्णुसहस्रनाम के ऋषि वेदव्यास है ; छन्द अनुष्टुप है ; प्रतिपादित देवता भगवान् देवकीपुत्र श्रीकृष्ण है ।

"विष्णो नाम सहस्रस्य वेदव्यासो महानृषिः ।
छन्दोनुष्टप् तथा देवों भगवान् देवकी सुतः ।।
अमृतांशूद्भवो बीजं शक्तिर्देवकिनन्दनः ।
त्रिसामा हृदयं तस्य शांत्यर्थे विनियुज्यते ।।

श्रीविष्णु सहस्रनाम प्रसिद्ध एवं अत्यन्त जनप्रिय है । इसकी चालीस से अधिक व्याख्याएँ है । सब से प्रथम व्याख्या श्री शङ्कराचार्य की है । श्री रामानुजाचार्य के आत्मीय शिष्य कूरेश के

Sri Vidyabharathi Book Centre, Sringeri

CC-O. In Public Domain. Digitized by eGangotri

पुत्र श्री पराशर भट्ट ने भी व्याख्या लिखी है। इसका मध्वमतानुपरक भाष्य श्री सत्यसन्धने लिखा है।

श्री विष्णु सहस्रनाम की महिमा निम्न लिखित श्लोक से स्पष्ट होती है -

"महाभारत सारत्वात् ऋषिभिः परिगानतः ।
वेदाचार्य समाहारत् भीष्मोत्कृष्टमतन्वतः ।।
परिग्रहातिशयतो गीताद्यैकार्थतश्च नः ।
सहस्रनाम्नामध्याय उपोदयतमो मतः ।।

(यह तो महाभारत के सारभूत गुणयुक्त है, बडे बडे ऋषियों से गाया गया है, वेदव्यास महर्षि से गूंथा गमा है , भीष्म के मतानुसार धर्मों में सर्वश्रेष्ठ है, चतुविर्ध फल प्राप्ति के माना गया है। कि यह अतिसुलभ एवं सफल साधन है तथा भगवद्गीता की अनुसारिणी होकर धर्म प्रचोदक है।)

प्रति दिन नियमित रूप से श्री विष्णुसहस्रनाम का पठन करनेवाले मानव को विविध प्रकार के लाभदायक फलों के साथ मोक्ष प्राप्त होता है।

"इतीदं कीर्तनीयस्य केशवस्य महामनः ।
नाम्नां सहस्रं पिव्यत्लामशेषेण प्रकीर्तितम् ।।
धर्मार्थी प्राप्नुयाद्धर्ममर्थार्थी चार्थमाप्नुताम् ।
कामानवाप्नुयात्कामी प्रजार्थी प्राप्नुयात्प्रजाम् ।।

Sri Vidyabharathi Book Centre, Sringeri

CC-O. In Public Domain. Digitized by eGangotri

रोगार्ती मुच्यते रोगाद्बद्धो मुच्येत बन्धनात् ।
भयान्मुच्येत भीतस्तु मुच्येतापन्न आपदः ।।
वासुदेवाश्रयो मर्त्यो वासुदेव परायणः ।
सर्वपाप विशुद्धात्मा याति ब्रह्म सनातनम् ।।

नियमित रूप से श्री विष्णुसहस्रनाम का पारायण करनेवाले धर्मापेक्षी धर्म को, अर्थापेक्षी अर्थ को, कामी अपनी काम को पुत्रापेक्षी पुत्र को प्राप्त करता है । रोगी रोग से, भीत व्यक्ति भय से, बन्धी बन्धन से तथा आर्ती आपदों से मुक्त होता है । वासुदेव का आश्रय लेकर वासुदेव का सदा ध्यान करनेवाले सर्व पापों से मुक्त होकर सनातन ब्रह्म को प्रात्प करते है ।

☆☆☆

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವಿಷ್ಣುಸಹಸ್ರನಾಮದ ಮಹಿಮೆ

- ಡಾ// ಎನ್. ಎಸ್. ಅನಂತರಂಗಾಚಾರ್ಯ

ಸಹಸ್ರನಾಮಗಳು ಎಂದರೆ ಸಾವಿರ ಹೆಸರುಗಳು. ಪರಮಾತ್ಮನ ದಿವ್ಯವಾದ ನಾಮಗಳು. ಇವುಗಳು ಅನ್ವರ್ಥವಾಗಿ ಆ ಪರಮಾತ್ಮನ ಗುಣಗಳನ್ನು ಆಶ್ರಯಿಸಿದುವಾಗಿ ಮಂತ್ರ ದ್ರಷ್ಟಾರರಾದ ಋಷಿಗಳಿಂದ ದೃಷ್ಟವಾದವು. 'ಋಷಿಭಿಃ ಪರಿಗೀತಾನಿ' ಎಂದು ಈ ಅಂಶವನ್ನು ವಿವರಿಸಿದ್ದಾರೆ. ಈ ದಿವ್ಯನಾಮಗಳನ್ನು ಒಂದು ಕ್ರಮದಲ್ಲಿ ಇಲ್ಲಿ ಅಳವಡಿಸಲಾಗಿದೆ. ಈ ಸಹಸ್ರನಾಮವು ಹೀಗೆ ಋಷಿಗಳಿಂದ ದೃಷ್ಟವಾಗಿ ಒಂದು ಅನುಪೂರ್ವಿಯಲ್ಲಿ ಜೋಡಿಸಲ್ಪಟ್ಟಿರುವುದರಿಂದ 'ಮಂತ್ರ'ವೇ ಆಗಿದೆ. ಈ ಮಂತ್ರ ಜಪದಿಂದ ಭಗವತ್ಪ್ರೀತಿಯಾಗಿ ಜಪಿಸುವವರ ಇಷ್ಟಾರ್ಥಗಳು ಕೈಗೂಡುತ್ತವೆ. ಈ ಮಂತ್ರ ಜಪವನ್ನು ಮಾಡುವ ಮೊದಲು ಋಷಿ, ದೇವತೆ, ಛಂದಸ್ಸು ಮೊದಲಾದವುಗಳನ್ನು ಅನುಸಂಧಾನ ಮಾಡಿ ಅಂಗನ್ಯಾಸ, ಕರನ್ಯಾಸಗಳನ್ನು ಮಾಡಬೇಕು. ಹೀಗೆ ಮಾಡಿದಾಗ ಜಪಿಸುವವನ ಶರೀರವೂ ಮಂತ್ರಮಯವಾಗುತ್ತದೆ.

ಶ್ರೀವಿಷ್ಣುಸಹಸ್ರನಾಮವು ಮಹಾಭಾರತದ ಪಂಚರತ್ನಗಳಲ್ಲಿ ಒಂದಾಗಿದೆ. ವಿಷ್ಣುಧರ್ಮೋತ್ತರ ಪುರಾಣದಲ್ಲಿ,

ಗೀತಾ ಸಹಸ್ರನಾಮ್ನೈವ ಸ್ತವರಾಜೋ ಹ್ಯನುಸ್ಮೃತಿಃ ।
ಗಜೇಂದ್ರ ಮೋಕ್ಷಣಂ ಚೈವ ಪಂಚರತ್ನಾನಿ ಭಾರತೇ ॥

ಎಂದು ಉಲ್ಲೇಖಿಸಲಾಗಿದೆ. ವಿಷ್ಣುಸಹಸ್ರನಾಮ ಮೋಕ್ಷಶಾಸ್ತ್ರ. ಅಷ್ಟೇ ಅಲ್ಲ, ಸರ್ವರೋಗನಿವಾರಕವಾದ ಮಹಾಮಂತ್ರವೂ ಹೌದು. ಚರಕ ಸಂಹಿತೆಯಲ್ಲಿ,

ವಿಷ್ಣುಂ ಸಹಸ್ರಮೂರ್ಧಾನಂ ಚರಾಚರ ಪತಿಂ ವಿಭುಂ ।
ಸ್ತುವನ್ನಾಮ ಸಹಸ್ರೇಣ ಜ್ವರಾನ್ ಸರ್ವಾನ್ ವ್ಯಪೋಹತಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ವಚನವೇ ಇದೆ. ಇದು ಸಕಲಪುರುಷಾರ್ಥ ಸಾಧಕವಾಗಿ ಅಪಾರವಾದ ಫಲವನ್ನು ನೀಡುವುದಾಗಿದೆ.

ಶ್ರೀವಿಷ್ಣುಸಹಸ್ರನಾಮವನ್ನು ಭೀಷ್ಮರು ಯುಧಿಷ್ಠಿರನಿಗೆ ಉಪದೇಶಿಸಿದರು. ಅಭ್ಯುದಯಕ್ಕೂ ನಿಃಶ್ರೇಯಸ್ಸಿಗೂ ಕಾರಣವಾಗುವ ಧರ್ಮಗಳನ್ನು ಧರ್ಮರಹಸ್ಯಗಳನ್ನು ಸಮಗ್ರವಾಗಿ ಭೀಷ್ಮರಿಂದ ಧರ್ಮರಾಯನು ಕೇಳಿದ ಮೇಲೆ, 'ಸಕಲ ಪುರುಷಾರ್ಥ ಸಾಧನಂ ಸುಖಸಂಪಾದ್ಯಂ ಅಲ್ಪಪ್ರಯಾಸಂ ಅನಲ್ಪ ಫಲಂ ಅನುಕ್ತಮಿತಿ ಕೃತ್ವಾ' - ಎಲ್ಲ ಪುರುಷಾರ್ಥಗಳಿಗೂ ಸಾಧನವಾಗಿರುವುದೂ, ಸುಲಭವಾಗಿ ಪಡೆದುಕೊಳ್ಳಬಹುದಾದುದೂ, ಸ್ವಲ್ಪವೇ ಪ್ರಯಾಸವನ್ನುಳ್ಳುದೂ, ಆದರೆ ಅಪರಿಮಿತವಾದ ಫಲವನ್ನುಳ್ಳುದೂ ಆದ ಧರ್ಮವು ಯಾವುದಾದರೂ ಇರುವುದಾದರೆ ಅದನ್ನು ತಿಳಿಯಬೇಕೆಂದು ಆರು ಪ್ರಶ್ನೆಗಳನ್ನು ಮಾಡುತ್ತಾನೆ. ಅವು ಆರು ಪ್ರಶ್ನೆಗಳಿಗೂ ನೇರವಾದ ಉತ್ತರಗಳನ್ನು ಭೀಷ್ಮಾಚಾರ್ಯರು ಕೊಡುತ್ತಾರೆ. ಈ ಪ್ರಶ್ನೋತ್ತರಗಳು ಈ ಮಹಾಮಂತ್ರದ ಸ್ವರೂಪವನ್ನೂ ಮಹಿಮೆಯನ್ನೂ ಪ್ರಕಾಶಪಡಿಸುತ್ತವೆ.

ಧರ್ಮರಾಯನು ಮಾಡಿದ ಮೊದಲನೆಯ ಪ್ರಶ್ನೆಯು 'ಕಿಮೇಕಂ ದೈವತಂ ಲೋಕೇ' - ಎಂಬುವುದಾಗಿದೆ. ಇದಕ್ಕೆ ಪರಮ ಜ್ಞಾನಿಗಳಾದ ಭೀಷ್ಮಾಚಾರ್ಯರ ಉತ್ತರ -

ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಂ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥
ಯತಃ ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೇ ।
ಯಸ್ಮಿಂಶ್ಚ ಪ್ರಲಯಂ ಯಾಂತಿ ಪುನರೇವ ಯುಗಕ್ಷಯೇ ॥
ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।
ವಿಷ್ಣೋರ್ನಾಮ ಸಹಸ್ರಂ ಮೇ ಶೃಣು ಪಾಪಭಯಾಪಹಂ ॥

ಎಂಬುದಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಯಾವನು ಪವಿತ್ರಗಳೆಲ್ಲಕ್ಕೂ ಪವಿತ್ರನಾಗಿರುವನೋ, ಮಂಗಲಗಳಿಗೂ ಮಂಗಲನೋ, ದೇವರುಗಳಿಗೆಲ್ಲ ದೇವನೋ, ಎಲ್ಲ ಪ್ರಾಣಿಗಳಿಗೂ ಅವ್ಯಯನಾದ ತಂದೆಯಾಗಿದ್ದಾನೆಯೋ, ಯಾವನಿಂದ ಎಲ್ಲ ಭೂತಗಳೂ ಹುಟ್ಟುತ್ತವೆಯೋ ಮತ್ತು ಯುಗಾಂತದಲ್ಲಿ ಯಾವನಲ್ಲಿ ಎಲ್ಲ ಭೂತಗಳೂ ಸೇರಿ ಹೋಗುವುವೋ ಅಂಥ ಲೋಕಪ್ರಧಾನನೂ ಜಗನ್ನಾಥನೂ ಆದ ಮಹಾವಿಷ್ಣುವಿನ ನಾಮ ಸಹಸ್ರವನ್ನು ಕೇಳು. ಈ ನಾಮ ಸಹಸ್ರವು ಪಾಪಭಯ ಪರಿಹಾರಕವಾದುದು."

ಶ್ರೀಮಹಾವಿಷ್ಣುವೇ ಪರಮ ದೈವವೆಂದು ಭೀಷ್ಮರು ಸ್ಪಷ್ಟವಾಗಿ ತಿಳಿಸಿದರು. ಭಗವದಪರಾಧರೂಪವಾದ ರಾಗದ್ವೇಷಗಳನ್ನೆಲ್ಲಾ ಬೇರು ಸಹಿತ ಹೋಗಲಾಡಿಸುವವನು ಅವನೊಬ್ಬನೇ.

ಧ್ಯಾಯೇನ್ನಾರಾಯಣಂ ದೇವಂ ಸ್ನಾನಾದಿಷು ಚ ಕರ್ಮಸು ।
ಪ್ರಾಯಶ್ಚಿತ್ತಂ ಹಿ ಸರ್ವಸ್ಯ ದುಷ್ಕೃತಸ್ಯೇತಿ ವೈ ಶ್ರುತಿಃ ॥

ಎಂದು ವಿಷ್ಣುವಿನ ಪಾರಮ್ಯವನ್ನು ಶ್ರುತಿಸ್ಮೃತಿ ಪುರಾಣೇತಿಹಾಸಾದಿಗಳು ಉದ್ಘೋಷಿಸುತ್ತಿವೆ.

'ವಿಷ್ಣುಂ ಕ್ರಾಂತಂ ವಾಸುದೇವಂ ವಿಜಾನನ್ ವಿಪ್ರೋ ವಿಪ್ರತ್ವಮಾಪ್ನುಯಾತ್', 'ನಾರಾಯಣ ಪರಾ ವೇದಾಃ',

'ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣೋ ಹರಿಃ ॥
'ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ ।
ಪುಮಾನ್ ವಿಮುಚ್ಯತೇ ಸದ್ಯಃ ಸಿಂಹ ತ್ರಸ್ತೈರ್ವೃಕೈರಿವ ॥ ಎಂದೂ,
'ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ ।
ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ ॥ ಎಂದೂ,
'ಸಕೃತ್ ಸ್ಮೃತೋಽಪಿ ಗೋವಿಂದೋ ನೃಣಾಂ ಜನ್ಮಶತೈಃ ಕೃತಂ ।
ಪಾಪರಾಶಿಂ ದಹತ್ಯಾಶು ತೂಲರಾಶಿಮಿವಾನಲಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದೂ ಶ್ರೀ ಮಹಾವಿಷ್ಣುವಿನ ಪರಮಪಾವನತ್ವವನ್ನು ಕೊಂಡಾಡಿದೆ. ಚಕ್ರಪಾಣಿಯಾದ ಶ್ರೀಕೃಷ್ಣನಿಗೆ ವಂಚನೆಯ ಬುದ್ಧಿಯಿಂದ ಮಾಡುವ ನಮಸ್ಕಾರವೂ ಸಹ ಸಂಸಾರದ ಬಂಧನಗಳನ್ನು ಕಳಚಿಹಾಕುವುದು ಎಂದು ಹೇಳಲಾಗಿದೆ. ಸರ್ವ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿರುವ ಆ ಪುರುಷೋತ್ತಮನಾದ ಶ್ರೀಮನ್ನಾರಾಯಣನ ಪರಾತ್ಪರತ್ವವನ್ನು ಭೀಷ್ಮಾಚಾರ್ಯರು ಕೊಂಡಾಡಿ ಅವನ ಮಹಿಮೆಯನ್ನು ಕೊಂಡಾಡುವ ದಿವ್ಯ ನಾಮಗಳನ್ನು ಅನುಸಂಧಾನ ಮಾಡಬೇಕೆಂದು ತಿಳಿಸಿದರು.

'ಹರಿರೇಕಃ ಸದಾ ಧ್ಯೇಯೋ ಭವದ್ಭಿಃ ಸತ್ವಸಂಸ್ಥಿತೈಃ ।
ಓಮಿತ್ಯೇವಂ ಸದಾ ವಿಪ್ರಾಃ ಪಠಧ್ವಂ ಧ್ಯಾತ ಕೇಶವಂ ॥

''ಎಲೈ ವಿಪ್ರರೇ, ನೀವು ಯಾವಾಗಲೂ ಸತ್ವಗುಣವನ್ನಾಶ್ರಯಿಸಿಕೊಂಡು ಹರಿಯೊಬ್ಬನನ್ನೇ ಧ್ಯಾನಿಸುತ್ತಿರಬೇಕು. ಕೇಶವನನ್ನು ಯಾವಾಗಲೂ 'ಓಮ್' ಎಂದು ಪಠಿಸುತ್ತಿರಿ ಹಾಗೂ ಧ್ಯಾನಿಸುತ್ತಿರಿ.''

ಯುಧಿಷ್ಠಿರನ ಎರಡನೆಯ ಪ್ರಶ್ನೆ - '**ಕಿಂ ವಾಪ್ಯೇಕಂ ಪರಾಯಣಂ**' ಎಂಬುದು.

ಇದಕ್ಕೆ ಭೀಷ್ಮಾಚಾರ್ಯರ ಉತ್ತರ -

ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಂ ॥

ಯಾವನು ಉತ್ತಮವೂ ಮಹತ್ತೂ ಆದ ತೇಜಸ್ಸಾಗಿದ್ದಾನೆಯೋ, ಯಾವನು ಉತ್ತಮವೂ ಮಹತ್ತೂ ಆದ ಬ್ರಹ್ಮನಾಗಿದ್ದಾನೆಯೋ, ಮತ್ತು ಯಾವನು ಉತ್ತಮವಾದ ಪರಮ ಲಕ್ಷ್ಯವಾಗಿದ್ದಾನೆಯೋ ಅವನು ಆ ಮಹಾವಿಷ್ಣುವೇ ಆಗಿದ್ದಾನೆ. ಅವನೊಬ್ಬನೇ ಸರ್ವಾಂತರ್ಯಾಮಿಯಾಗಿ ಸರ್ವ ನಿಯಾಮಕನಾಗಿದ್ದಾನೆ. ಅಪರಿಮಿತವಾದ ಐಶ್ವರ್ಯವುಳ್ಳ ಸರ್ವೇಶ್ವರನಾಗಿದ್ದಾನೆ. ಈ ಮಹಾವಿಷ್ಣು ಅತ್ಯಂತ ಸ್ಪೃಹಣೀಯನಾಗಿರುವುದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನೇ ಪರಮಪುರುಷಾರ್ಥನಾಗಿದ್ದಾನೆ. ಪರಮಗತಿಯಾಗಿದ್ದಾನೆ. ಶ್ರೀಮನ್ನಾರಾಯಣನೇ ಪರಮ ಪರಾಯಣನೆಂದು ಭೀಷ್ಮಾಚಾರ್ಯರು ಹೀಗೆ ಉಪದೇಶಿಸಿದ್ದಾರೆ. - ಎಂದು ಶ್ರುತಿ ಹೇಳುವಂತೆ ಭಗವಂತನ ದಿವ್ಯ ನಾಮಸಂಕೀರ್ತನೆಯ ಮಹತ್ತ್ವವನ್ನು ತೋರಿಸಿಕೊಡುತ್ತದೆ. ಇಂಥ ಪರಮ ಪವಿತ್ರವಾದ ಸ್ತೋತ್ರದ ಅನುಸಂಧಾನದಿಂದ ಎಲ್ಲರೂ ಧನ್ಯರಾಗುವಂತಾಗಲಿ.

ಧರ್ಮರಾಯನ ಮೂರನೆಯ ಪ್ರಶ್ನೆಯಾದರೋ - **'ಸ್ತುವಂತಃ ಕಿಂ ಮಾನವಾಃ ಶುಭಂ ಪ್ರಾಪ್ನುಯುಃ'** - ಯಾವನನ್ನು ಸ್ತುತಿಸುತ್ತಿದ್ದರೆ ಮಾನವರು ಶುಭವನ್ನು ಹೊಂದಿಯಾರು - ಎಂಬುವುದೇ ಆಗಿದೆ.

ಇದಕ್ಕೆ ಭೀಷ್ಮರು ಉತ್ತರಿಸುತ್ತಾರೆ -

ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಂ ।
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥

ಎಂದು, ಅನಾದ್ಯನಂತನೂ, ಸರ್ವಲೋಕಮಹೇಶ್ವರನೂ ಲೋಕಾ-ಧ್ಯಕ್ಷನೂ ಆದ ಶ್ರೀಮಹಾವಿಷ್ಣುವನ್ನು ನಿತ್ಯವೂ ಸ್ತುತಿಸುತ್ತಿದ್ದರೆ ಸರ್ವ ದುಃಖಾತೀತನಾಗುವನು.

ಲೋಕದ ಜನರಿಗೆಲ್ಲ ಸುಲಭವಾದ ಉಪಾಯವನ್ನು ಹೀಗೆ ಭೀಷ್ಮಾಚಾರ್ಯರು ತೋರಿಸಿಕೊಟ್ಟಿದ್ದಾರೆ. ಕರ್ಮಯೋಗಜ್ಞಾನಯೋಗಾದಿಗಳನ್ನನುಷ್ಠಿಸಿ ಭಕ್ತಿಯೋಗವೆನ್ನುವ ಉಪಾಸನೆಯನ್ನು ಅನುಷ್ಠಿಸುವುದು ಬಹಳ ಕಷ್ಟಕರವಾದುದು. ಅನೇಕ ಜನ್ಮಾರ್ಜಿತವಾದ ಪುಣ್ಯಸಂಚಯದ ಕಾರಣ ಮನಸ್ಸಿನ ಕ್ಲೇಶಗಳನ್ನು ಹೋಗಲಾಡಿಸಿಕೊಂಡವರಿಗೆ ಮಾತ್ರ ಅದು ಸಾಧ್ಯ. ಹಾಗಾದರೆ ಅಂಥ ಉಪಾಯವನ್ನು ಆಚರಿಸಲಾಗದವರಿಗೆ ಏನು ಗತಿ ಎಂದರೆ ಅವರಿಗೆ ಸುಲಭವಾದ ಉಪಾಯ ಈ ಬಗೆಯಾದ ಸ್ತುತಿ ಎಂದು ತಿಳಿಸುತ್ತಾರೆ. ಸ್ತೋತ್ರ ಮಾಡುವವರ ಸಕಲಾಭೀಷ್ಟಗಳನ್ನು ಪೂರ್ಣಗೊಳಿಸಲು ಪರ್ಯಾಪ್ತವಾದ ಮಹಾವಿಭೂತಿಯನ್ನುಳ್ಳವನಾಗಿದ್ದಾನೆ ಪರಮಾತ್ಮ. ಅಂಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮನ್ನಾರಾಯಣನನ್ನು ನಿತ್ಯವೂ ಸ್ತೋತ್ರ ಮಾಡುವವನು ಎಲ್ಲ ದುಃಖಗಳನ್ನು ಕಳೆದುಕೊಳ್ಳುತ್ತಾನೆ.

ಯುಧಿಷ್ಠಿರನ ನಾಲ್ಕನೆಯ ಪ್ರಶ್ನೆ - 'ಕಂ ಅರ್ಚಯಂತಃ ಪ್ರಾಪ್ನುಯುಃ ಮಾನವಾಃ ಶುಭಂ' - 'ಯಾವನನ್ನು ಅರ್ಚಿಸುತ್ತಿದ್ದರೆ ಮಾನವರು ಶುಭವನ್ನು ಹೊಂದಿಯಾರು ? ಭೀಷ್ಮಾಚಾರ್ಯರ ಉತ್ತರ ಇದಕ್ಕೆ ಹೀಗಿದೆ -

ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಂ ।
ಧ್ಯಾಯನ್ ಸ್ತುವನ್ ನಮಸ್ಯಂಶ್ಚ ಯಜಮಾನಸ್ತಮೇವ ಚ ॥

ಜಗತ್ತಿಗೆ ಪ್ರಭುವೂ, ದೇವ ದೇವನೂ ಆದ ಪುರುಷೋತ್ತಮನನ್ನೇ ಅರ್ಚಿಸುತ್ತಲೂ, ಅವ್ಯಯನಾದ ಆ ಪುರುಷೋತ್ತಮನನ್ನೇ ನಿತ್ಯವೂ ಭಕ್ತಿಯಿಂದ ಧ್ಯಾನಿಸುತ್ತಲೂ ನಮಸ್ಕರಿಸುತ್ತಲೂ ಪೂಜಿಸುತ್ತಲೂ ಇದ್ದರೆ ದುಃಖಾತಿಗನಾಗುತ್ತಾನೆ.

ಆ ಮಹಾವಿಷ್ಣುವಿಗೇ ಬಾಹ್ಯ ಪೂಜೆಯನ್ನು ಆಂತರವಾದ ಪೂಜೆಯನ್ನೂ ಸಲ್ಲಿಸಬೇಕು. ತ್ರಿಕರಣಗಳಿಂದಲೂ ಅವನನ್ನೇ ಭಜಿಸಬೇಕು. ಅವನೇ ಪೂಜ್ಯತಮ.

ತಮಿಮಂ ಸರ್ವಸಂಪನ್ನಂ ಆಚಾರ್ಯಂ ಪಿತರಂ ಗುರುಂ ।
ಅರ್ಚ್ಯಮರ್ಚಿತುಮಿಚ್ಛಾಮಃ ಸರ್ವೇ ಸಂಮಂತುಮರ್ಹಥ ॥ ಎಂದೂ

ತಸ್ಮಾತ್ ಪೂಜ್ಯತಮಂ ನಾನ್ಯಮಹಂ ಮನ್ಯೇ ಜನಾರ್ದನಾತ್

ಎಂದೂ ಹೇಳಿದಂತೆ ಪುಂಡರೀಕಾಕ್ಷನನ್ನು ಪೂಜಿಸಿದರೆ ಅನಂತವೂ ಅಕ್ಷಯವೂ ಆದ ಫಲಪ್ರಾಪ್ತಿ ಉಂಟಾಗುತ್ತದೆ. ಭಕ್ತಿ ಎಂಬುದು ಪ್ರೀತಿ ಪೂರ್ವಕವಾದ ಅನುಧ್ಯಾನ. ಆ ಪರಮಾತ್ಮನ ದಿವ್ಯಾನುಭವದಿಂದುಟಾದ ಆನಂದದ ಕಾರಣ ಪುಲಕಿತದೇಹನಾಗಿ ಗದ್ಗದವಾದ ಧ್ವನಿಯಿಂದ ಅವನ ಗುಣಸಂಕೀರ್ತನ ಮಾಡುವುದನ್ನು 'ಸ್ತುವನ್' ಎಂಬುದು ತಿಳಿಸುತ್ತದೆ. ಹೀಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸತತವಾಗಿ ಆ ಪುಂಡರೀಕಾಕ್ಷನನ್ನು ಅರ್ಚಿಸಬೇಕೆಂದು ಭೀಷ್ಮಾಚಾರ್ಯರು ತಿಳಿಸಿ ಕೊಡುತ್ತಾರೆ.

ಯುಧಿಷ್ಠಿರನ ಐದನೆಯ ಪ್ರಶ್ನೆ - **'ಕೋ ಧರ್ಮಃ ಸರ್ವಧರ್ಮಾಣಾಂ ಭಗವತಃ ಪರಮೋ ಮತಃ'** - 'ಧರ್ಮಗಳಲ್ಲೆಲ್ಲಾ ಯಾವ ಧರ್ಮವು ನಿಮ್ಮ ಮತಕ್ಕನುಸಾರವಾಗಿ ಹೆಚ್ಚಿನದು ?'

ಭೀಷ್ಮಾಚಾರ್ಯರು ಹೀಗೆ ಉತ್ತರಿಸುತ್ತಾರೆ -

ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥

'ಮನುಷ್ಯನು ಸದಾ ಭಕ್ತಿಯಿಂದ ಶ್ರೀಮನ್ನಾರಾಯಣನನ್ನು ಸ್ತೋತ್ರಗಳಿಂದ ಆರಾಧಿಸುವುದೇ ಧರ್ಮಗಳಲ್ಲೆಲ್ಲಾ ಹೆಚ್ಚಿನ ಧರ್ಮವೆಂದು ನನ್ನ ಅಭಿಪ್ರಾಯ'.

ಪರಮಾತ್ಮನ ಸ್ತುತಿರೂಪವಾದ ಆರಾಧನೆ ಇತರ ಎಲ್ಲ ಆರಾಧನೆಗಳಿಗಿಂತ ಶ್ರೇಷ್ಠವಾದುದು. ಇಲ್ಲಿ ಹಿಂಸೆಯೇ ಮೊದಲಾದ ಪಾಪಕರ್ಮಗಳಿಲ್ಲ. ದೇಶ, ಕಾಲ, ನಿಯಮಗಳ ಅಪೇಕ್ಷೆ ಇಲ್ಲ. ಭಗವಂತನ ಸ್ಮರಣೆ, ಕೀರ್ತನ ಮತ್ತು ಪ್ರಣಾಮಗಳನ್ನು ಮಾಡಿ ಭಕ್ತಿಯಿಂದ ಆ ಪುರುಷೋತ್ತಮನನ್ನು ಆರಾಧಿಸುವುದು ಸರ್ವಶ್ರೇಷ್ಠವಾದ ಧರ್ಮ. ಇದು ಅಮೃತದಂತೆ ಭಕ್ತನಿಗೆ ಅತ್ಯಂತ ಪ್ರಿಯತಮವಾಗಿರುವುದು. ಈ ರೀತಿಯಾಗಿ ಭಗವದರ್ಚನೆ ಮಾಡುವುದಕ್ಕೆ ಎಲ್ಲ ಚೇತನರಿಗೂ ಅಧಿಕಾರವಿದೆ. ಎಲ್ಲ ವರ್ಣದವರೂ, ಆಶ್ರಮದವರೂ, ಅನಾಶ್ರಮಿಗಳೂ ಭಗವಂತನನ್ನು ಹೀಗೆ ಸೇವಿಸಬಹುದು. ಈ ರೀತಿಯ ಲಘೂಪಾಯವಾದ ನಾಮಸಂಕೀರ್ತನೆಯಿಂದ ಮಹತ್ತಮವಾದ ಮೋಕ್ಷ ಲಭಿಸುವುದೇ ಎಂದು ಸಂದೇಹಿಸಬೇಕಾಗಿಲ್ಲ. ಇಲ್ಲಿ 'ಭಾವಶುದ್ಧಿ' ಎಂಬ ವಿಶೇಷವಾದ ಶಕ್ತಿ ಇದೆ. ಇದರಿಂದ ಮೋಕ್ಷಪ್ರಾಪ್ತಿಯು ಖಂಡಿತ ಲಭಿಸುವುದೆಂದು ಭೀಷ್ಮಾಚಾರ್ಯರ ನಿಶ್ಚಿತವಾದ ಅಭಿಪ್ರಾಯವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವೇಷಾಮಪಿ ಧರ್ಮಾಣಾಮುತ್ತಮೋ ವೈಷ್ಣವೋ ವಿಧಿಃ ।
ರಕ್ಷಕೋ ಭಗವನ್ವಿಷ್ಣುಃ ಭಕ್ತಾನಾತ್ಮ ಶರೀರವತ್ ।।
ಗೋವಿಂದ ಭಕ್ತ್ಯಾಭ್ಯಧಿಕಂ ಶ್ರೇಯಶ್ಚಾನ್ಯನ್ನ ವಿದ್ಯತೇ ।।

ಎಂದು ಹೇಳಲಾಗಿದೆಯಷ್ಟೇ ?

ಧರ್ಮರಾಯನು ಕೇಳಿದ ಆರನೆಯ ಪ್ರಶ್ನೆ - '**ಕಿಂ ಜಪನ್ಮುಚ್ಯತೇ ಜಂತುಃ ಜನ್ಮಸಂಸಾರಬಂಧನಾತ್**' - ಯಾವುದನ್ನು ಜಪಿಸುವುದರಿಂದ ಪ್ರಾಣಿಗಳು ಜನ್ಮ ಸಂಸಾರಗಳ ಕಟ್ಟಿನಿಂದ ಬಿಡುಗಡೆ ಹೊಂದುತ್ತವೆ ?

ಭೀಷ್ಮರ ಉತ್ತರ ಹೀಗಿದೆ -

'ಜಗತ್ಪ್ರಭುಂ ದೇವದೇವಮನಂತಂ ಪುರುಷೋತ್ತಮಂ ।
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ ।।

'ಜಗತ್ತಿಗೆ ಪ್ರಭುವೂ ದೇವದೇವನೂ ಅನಂತನೂ ಆಗಿರುವ ಪುರುಷೋತ್ತಮನನ್ನು ಮನುಷ್ಯನು ಸಹಸ್ರನಾಮಗಳಿಂದ ಯಾವಾಗಲೂ ಸ್ತುತಿಸುತ್ತಿದ್ದರೆ ಅವನು ಜನ್ಮ ಸಂಸಾರಬಂಧನದಿಂದ ಬಿಡುಗಡೆ ಹೊಂದುತ್ತಾನೆ'.

'**ಜಪ್ಯೇನೈವ ತು ಸಂಸಿಧ್ಯೇತ್ ಬ್ರಾಹ್ಮಣೋ ನಾತ್ರ ಸಂಶಯಃ**' ಎಂದೂ '**ಯಜ್ಞಾನಾಂ ಜಪಯಜ್ಞೋಽಸ್ಮಿ**' ಎಂದು '**ದ್ರವ್ಯಯಜ್ಞಾತ್ ಜಪಯಜ್ಞೋ ವಿಶಿಷ್ಟಃ**' ಎಂದೂ ಹೇಳಿರುವಂತೆ ಜಪಯಜ್ಞಕ್ಕೆ ಆ ಪರಮಪುರುಷನೇ ವಿಷಯನಾಗಿದ್ದಾನೆ. ಎಲ್ಲ ದೇವರುಗಳಿಗಿಂತಲೂ ಐಶ್ವರ್ಯದಲ್ಲಿ ಮಿಗಿಲಾದವನು ಅವನು. ಪರಮೋದ್ಧಾರಕನೂ, ದೇಶ ಕಾಲಾದಿಗಳ ಪರಿಚ್ಛೇದವಿಲ್ಲದವನೂ ಆದ ಆ ಪರಮಾತ್ಮನನ್ನು ನಿರಂತರವಾಗಿ ಸ್ತುತಿಸುವುದು ಮತ್ತು ಧ್ಯಾನಿಸುವುದು ಮನುಷ್ಯರಿಗೆ ಪರಮೋಪಾದೇಯವಾದ ಮೋಕ್ಷೋಪಾಯವಾಗಿದೆ ಎಂದು ಭೀಷ್ಮಾಚಾರ್ಯರು ತಮ್ಮ ನಿಶ್ಚಿತವಾದ ಮತವನ್ನು ತಿಳಿಸಿದ್ದಾರೆ. ಹೀಗೆ ತಿಳಿಸಿ ಆ ಪುರುಷೋತ್ತಮನ ಸಹಸ್ರನಾಮಗಳನ್ನು ಉಪದೇಶಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಭೀಷ್ಮಾಚಾರ್ಯರಿಗೆ ಅತ್ಯಂತ ಸಮ್ಮತವಾದ ತತ್ತ್ವ - ಹಿತ - ಪುರುಷಾರ್ಥಗಳನ್ನು ತಿಳಿಯಪಡಿಸುವ ಈ ದಿವ್ಯವಾದ ಸ್ತೋತ್ರ ಪರಮ ಪಾವನವಾಗಿ ಅನುಸಂಧಾನ ಮಾಡುವವರಿಗೆ ಸಕಲಫಲಗಳನ್ನು ಅನುಗ್ರಹಿಸುವುದಾಗಿದೆ. 'ಸದಾ ತೇ ನಾಮ ಸ್ವಯಶೋ ವಿವಕ್ಮಿ' - ಎಂದು ಶ್ರುತಿ ಹೇಳುವಂತೆ ಭಗವಂತನ ದಿವ್ಯನಾಮ ಸಂಕೀರ್ತನೆಯ ಮಹತ್ತ್ವವನ್ನು ತೋರಿಸಿಕೊಡುತ್ತದೆ. ಇಂಥ ಪರಮ ಪವಿತ್ರವಾದ ಸ್ತೋತ್ರದ ಅನುಸಂಧಾನದಿಂದ ಎಲ್ಲರೂ ಧನ್ಯರಾಗುವಂತಾಗಲಿ.

ಜನಾರ್ದನಂ ಭೂತಪತಿಂ ಜಗದ್ಗುರುಂ
ಸ್ಮರನ್ ಮನುಷ್ಯಃ ಸತತಂ ಮಹಾಮುನೇ ।
ದುಃಖಾನಿ ಸರ್ವಾಣ್ಯಪಹಂತಿ ಸಾಧಯ -
ತ್ಯಶೇಷಕಾರ್ಯಾಣಿ ಚ ಯಾನ್ಯಭೀಪ್ಸತೇ ॥

ಇತಿ ಶಮ್

☆☆☆

Sri Vidyabharathi Book Centre, Sringeri

CC-O. In Public Domain. Digitized by eGangotri

शान्तिः कलौ ह्यघौघस्य नामसङ्कीर्तनं हरेः

- *विद्वान् शेषाचलशर्मा*

श्रीरङ्गं सद्गुरुं नत्वा गोविन्दं च जगद्गुरुम् ।
विष्णोर्नामसहस्रस्य महिमा कीर्त्यते मया ।।

वेदे रामायणे चैव पुराणेषु च भारते ।
आदावन्ते च मध्ये च विष्णुः सर्वत्र गीयते ।।

जगत्यामस्यां जायमानेष्वपि कोटिशो जन्तुषु दुर्लभतमं खलु नरस्य जन्मेति निगदन्ति हि निखिलानि शास्त्राणि । देवा अपि मानवजन्मनो महिमानं गायन्ति किल -

"गायन्ति देवाः किल गीतकानि धन्यास्तु ते भारतभूमिभागे ।
स्वर्गापवर्गास्पदमार्गभूते भवन्ति भूयः पुरुषाः सुरत्वात् ।।
कर्माण्यसङ्कल्पिततत्फलानि संन्यस्य विष्णौ परमात्मभूते ।
अवाप्य तां कर्ममहीमनन्ते तस्मिन् लयं ये त्वमलाः प्रयान्ति ।।
जानीम नैतत् क्व वयं विलीने स्वर्गप्रदे कर्मणि देहबन्धम् ।
प्राप्स्याम धन्याः खलु ते मनुष्या ये भारते नेन्द्रिय विप्रहीनाः ।।"

(वि.पु. २-३)

इति ।

प्राप्येदं मानुषं जन्म विवेकवता पुरुषेण तस्य परमं लक्ष्यं प्राप्तव्यमिति प्रपञ्चपारदृश्वनां महामनीषिणां परमर्षीणां जग द्धिताय

Sri Vidyabharathi Book Centre, Sringeri

CC-O. In Public Domain. Digitized by eGangotri

कृतो महामङ्गलसन्देशः । पुरुषार्थप्राप्त्या हि पुरुषस्य जन्म सार्थकं भवेत् । धर्मोऽर्थः कामो मोक्ष इति चतुर्धा खलु पुरुषार्थविभागः । आद्यानां त्रयाणां वर्गः त्रिवर्ग इति ख्यातः इह लोके अभ्युदय सिद्धिहेतुर्भवति । चतुर्थस्तु मोक्षः अपवर्ग इति ख्यातः परम पुरुषार्थतामाप्नोति । जीवननद्याः धर्ममोक्षौ हि रोधसी उभे भवतः । तन्मध्ये हि अर्थकामप्रवाहः प्रकर्षेण प्रवहेत् । रोधसी भङ्क्त्वा अतिक्रम्य च प्रवहन् प्रवाहः महतेऽनर्थाय भवेत् । अतो विवेकवता मानवेन धर्ममोक्ष योर्मर्यादा नातिक्रमणीया ।

भगवदुपासनया हि पुरुषार्थसिद्धिं प्राप्य मानवो जीवनस्य सार्थक्यं सम्पादयितुं प्रभवति । ज्ञानविज्ञानसम्पन्नैर्महर्षिभिः नानाविधा भगवदुपासनामार्गा उपदिष्टा वर्तन्ते । भिन्नभिन्ना हि मानव प्रकृतिर्भवति । भिन्नभिन्नमानवप्रकृत्यानुगुण्येन उपासना मार्गा अपि भिन्नभिन्ना भवन्ति । ज्ञानं भक्तिः कर्म चेति भगव त्प्राप्तेः प्रधानभूता उपाया भवन्ति । एते ह्युपायाः परस्परोप षृम्भका एव भवन्ति । पूजा, जपः, स्तोत्रं, ध्यानं, योगः - इत्यादयः सर्वेऽपि चित्तशुद्धेः सम्पत्तये भगवद्-भावसंवर्धनाय च सहकारिणो भवन्ति । एतदर्थं स्तोत्रवाङ्मयम् अत्यन्त सहकारि सम्पद्यते । यथा यथा हि भगवतो दिव्यानां गुणानां कीर्तनं क्रियते तथा तथा भगवतो महिम्नः अनुसन्धानं वर्धते । अपि च, अन्तरङ्गे बहिरङ्गे च सर्वत्र भगवद्भावपूरः प्रवहति । अन्तःकरणदोषा दूरीभवन्ति ।

Sri Vidyabharathi Book Centre, Sringeri

CC-O. In Public Domain. Digitized by eGangotri

वेदेऽपि विशिष्टा देवतास्तोत्रभागा विपुला उपलभ्यन्ते । रामायणे, महाभारते, पुराणेषु, मन्त्रतन्त्रशास्त्रेषु, महाकाव्येषु च देवतास्तोत्रवाङ्मयं विपुलमवलोक्यते । कवितासमर्थाः सिद्धिमन्तः ज्ञानिनः उपासकाश्च भगवदनुग्रहसम्पन्नाः सन्तः भक्त्यतिशयेन सहस्रशः स्तोत्राणि विरचयामासुः, विरचयन्ति, विरचयिष्यन्ति च ।

परमात्मनः पवित्राणां नाम्नां पठनेन पारायणेन च पुण्य भाजः पुरुषाः सकलपुरुषार्थसिद्धिं सुलभतया लभन्ते । भगवतो गुणान् महिमानं लीलाविभूतीश्च अनुसन्धाय भगवतो दिव्यनाम्नां कीर्तनं कुर्वतां हृदयं पापरहितं परिशुद्धं भवति ।

परमात्मा हि ओङ्कारवाच्यः ओङ्काररूपी च भवति । ओङ्कारो नाम परं चापरं च ब्रह्म । भगवती श्रुतिः प्रतिपाद यति "परं चापरं च ब्रह्म यदोङ्कारः" इति । सर्वोऽपि वाक्प्र पञ्चः ओङ्कारेणैव व्याप्तः । "ओङ्कारेणैव सर्वा वाक् सन्तृण्णा" इत्येव श्रुतिशिरो व्याहरति । प्रणवरूपिणः प्रणव प्रतिपाद्यस्य च परमात्मनः केनापि नाम्ना स्तुतिः कृता अन्तरङ्गे प्रणवमार्गमुद्घाट्य परमात्मानमेव प्रापयतीति सत्यं सत्यं पुनरपि सत्यमेव । कलौ किलास्मिन् युगे भगवदनुग्रहेण निःश्रेयसप्राप्तये नामसंकी र्तनसमः नास्त्यन्यः सुलभतमः कश्चिदुपाय इति पारमर्षो घोषः । विष्णुपुराणे हि निगद्यते -

"ध्यायन् कृते यजन् यज्ञैस्त्रेतायां द्वापरेऽर्चयन् । यदाप्नोति

Sri Vidyabharathi Book Centre, Sringeri

CC-O. In Public Domain. Digitized by eGangotri

तदाप्नोति कलौ संकीर्त्य केशवम् ।।" इति । देव देवः सर्वदेवमयो हि परमात्मा । शिवः विष्णुः, रामः, कृष्णः, लक्ष्मीः, पार्वती, सरस्वती, ललिता - इत्यादयः सर्वा अपि दिव्यमूर्तयः परमात्मनः नित्यविभूतयो विराजन्ते । वेदशास्त्र पुराणेतिहासादीनां परमं सत्यभूतं तात्पर्यमिदमेव । महर्षिभिः प्रोक्तेषु पुराणेतिहासादिषु नैकविधानि अष्टोत्तरसहस्रनाम प्रभृतीनि वाङ्मयानि समुपलभ्यन्ते । तानि सर्वाण्यपि महर्षीणां तपःप्रभावात् समुद्भूतानि । तानि च श्रद्धया भक्त्या निष्ठया च सेवितानि परमश्रेयसे सम्पद्यन्ते । ईदृशेषु च सहस्र नामस्तोत्रेषु श्रीविष्णोर्दिव्यसहस्रनामस्तोत्रं नाम परमं पवित्रं मङ्गलानां च मङ्गलं भवति ।

इदं च स्तोत्ररत्नं महामन्त्ररूपं विजृम्भते । शास्त्रे मन्त्र स्वरूपविभागः एवं दृश्यते :-

"मन्त्रा एकाक्षराः पिण्डाः कर्तर्यो द्व्यक्षरा मताः ।
वर्णत्रयं समारभ्य नवार्णा विधिबीजकाः ।।
ततो दशार्णमारभ्य यावद्विंशति मन्त्रकाः ।
तत ऊर्ध्वं गता मालाः तासु भेदो न विद्यते ।।" इति ।

सामान्यतः सर्वेऽपि मन्त्रनाम्ना व्यपदिश्यन्ते । भावनानु सारेण व्यष्टिदृष्ट्या वा समष्टिदृष्ट्या वा विचारे कृते सर्वप्रकारमन्त्ररूपं दिव्ये विष्णुसहस्रनामस्तोत्रे समाविशति । परमात्मा हि सकलमन्त्रमयो विराजते इत्येव रहस्यार्थोऽत्र वेदितव्यः । "मननाच्चैव त्राणाच्च मन्त्र इत्यभिधीयते " इति मन्त्रनिर्वचनं वरीवर्ति ।

Sri Vidyabharathi Book Centre, Sringeri

CC-O. In Public Domain. Digitized by eGangotri

ऋषिच्छन्दोदेवताविनियोगानुसन्धानपूर्वकमेव मन्त्रजपः कर्तव्य इति शास्त्रमर्यादा विद्यते । श्रीविष्णुसहस्रनामस्तोत्र महामन्त्रस्य भगवान् वेदव्यासः ऋषिः । द्वात्रिंशदक्षरपरिमाणं अनुष्टुप् छन्दः । सर्वव्यापी परमात्मा नारायणो देवता । पर मात्मनो नारायणस्य प्रीतिपरमानुग्रहार्थे महामन्त्रस्यास्य विनि योगः । अपि च जपारम्भे बीजशक्तिकीलकादीनां रहस्य मधिगम्य जापको मन्त्रजपं कुर्यात् । श्रीविष्णुसहस्रनामस्तोत्र सेविनां कर्मणो भक्तेर्ज्ञानस्य च फलानि सुलभानि सिद्ध्यन्ति । एकैकस्यापि नाम्नः चतुर्थ्यन्तप्रयोगेण नमोऽन्तेन भगवतः पूजापि विधीयते । स्तोत्रजपः मानसिकोऽथवोपांशुरूपो भवेत् । सुश्राव्यतया उच्चस्वरेणापि स्तोत्रपाठः भक्तिभरसिद्धये कल्पते । दिव्यमिदं सहस्रनामस्तोत्रं भगवतः अन्तरङ्ग बहिरङ्गोभयविधपूजायामपि परमोपकारकं भवति । बहिरङ्गपूजा हि अन्तरङ्गपूजायां परिणता सती पर्यवसाने परमात्मतादात्म्ये प्रतिष्ठिता भवति । तस्यामवस्थायामुपासके ज्ञानमयं परमानन्दमयं चान्तरं ज्योतिः केवलं प्रकाशते । ध्यातृ ध्यानध्येयानामभेदभानं हि उपासनायाः परमं फलम् । अर्चनं वन्दनं स्तवनमित्यादिकं सर्वमभेदभावनया अनुष्ठेयमिति हि परिशुद्ध ज्ञानमार्गस्य रहस्यम् । तथा हि -

"नाविष्णुः कीर्तयेद्विष्णुं नाविष्णुर्विष्णुमर्चयेत् ।
नाविष्णुः संस्मरेद्विष्णुं नाविष्णुर्विष्णुमाप्नुयात् ।।" इति ।

Sri Vidyabharathi Book Centre, Sringeri

CC-O. In Public Domain. Digitized by eGangotri

श्रीविष्णुसहस्रनामस्तोत्रं नाम महाभारतसमुद्रादुद्धूतं श्रेष्ठतममेकं रत्नम् ।

"धर्मे चार्थे च कामे च मोक्षे च भरतर्षभ ।
यदिहास्ति तदन्यत्र यन्नेहास्ति न तत् क्वचित् ॥"

इति वचनानुसारेण महाभारतं तु सकलपुरुषार्थप्रज्ञायाः परमाकरः । महाभारतस्य सारभूतमिदं श्रीविष्णुसहस्रनामस्तोत्रं विनायासेन पुरूषर्थप्राप्तये परमसुलभं साधनं सङ्गीयते । जपयज्ञरूपमिदं भगवतः साक्षात् विभूतिरेव भवति । हिंसा वा पुरूषान्तरसहकारो वा द्रव्यं वा देशो वा कालो वा नियम विशेषो वा - इत्यादीनामस्मिन् जपयज्ञे नैवापेक्षा भवति । "यज्ञानां जपयज्ञोऽस्मि" इति भगवद्वचनानुसारेण भगवतो विभूतिविशेष एवायं जपयज्ञः । श्रेयानयं ज्ञानयज्ञोऽपि भवति ।

"एष मे सर्वधर्माणां धर्मोऽधिकतमो मतः ।
यद्भक्त्या पुण्डरीकाक्षं स्तवैरर्चेन्नरः सदा ॥"
"जपस्तु सर्वधर्मेभ्यः परमो धर्म उच्यते ।
अहिंसया च भूतानां जपयज्ञः प्रवर्तते ॥"

इत्युक्ते : भक्त्या कृतेन जपयज्ञेन हृदयपुण्डरीके परमात्मा वासुदेवः प्रकाशते । देवदेवस्य जगत्प्रभोः पुरुषोत्तमस्य नारायणस्य विभूतिमहिमादिप्रकाशकं महामन्त्ररूपमिदं स्तोत्रं समेषामपि श्रेयोऽभिलाषिणां पठनश्रवणमननध्यानादीनां कृते परमोपायता

Sri Vidyabharathi Book Centre, Sringeri

CC-O. In Public Domain. Digitized by eGangotri

मासादयति । भगवतः अनन्तकल्याणगुणगणप्रति पादनपराणि खल्विमानि दिव्यनामानि । देवतान्तराभिधायका नीव श्रूयमाणान्यपि नामानि परदेवतायाः नानाविधविभूती रेवात्र स्तुवन्तीति हेतोः साक्षात् परमात्मैव तात्पर्येण परिष्टुतो भवतीति विज्ञेयं विचक्षणैः । विष्ण्वादिनामानि पुनरुक्तान्यपि अर्थभेदेन अनुसन्धानप्रयोजकानीति नास्त्यवकाशः पुनरुक्ति दोषस्य । एकार्थकान्यपि श्रीपतिमाधवादि नामानि शब्दब्रह्मणः प्रपञ्चतां भजन्तीति नास्त्यवसरो दोषभावनायाः प्रसरस्य । परायणभूतं किमेकं दैवतमिति युधिष्ठिरकृतस्य प्रश्नस्य उत्तररूपेण परमभागवतवरो भीष्मपितामहः नामभिरेतैः देवं परमात्मानमेव प्रतिपादयतीति हेतोः नास्त्यत्र पुनरुक्तिशङ्का वकाशलेशोऽपि । भगवान् खलु विश्वरूपी भवतीति कारणात् स्त्री पुमान् नपुंसकमिति सर्वैरपि रूपैर्भगवानेव विराजते । तत्त्व तस्तु भगवान् सर्वातिशायी प्रकाशते । अत एव स्त्री पुमान् नपुंसकमिति त्रिष्वपि लिङ्गेषु नामानि पठितानि दृश्यन्ते । लिङ्ग नियमानास्पदभूताः अव्ययशब्दा अपि भगवन्तमेव प्रतिपादयन्ति । फलश्रुतिपरेषु श्लोकेषु स्तोत्रपठनस्य प्रयोजनानि विशदतया वर्णितानि । यज्ञयागव्रतादिषु शुभकर्मसु श्राद्धादि पितृकर्मसु च श्रीविष्णुसहस्रनामपठनस्य संप्रदायो विद्यतेतराम् । "यज्ञो वै विष्णुः" इति श्रुतिवचनात् यज्ञरूपी खलु भगवान् । श्राद्धसंरक्षको देवोऽपि विष्णुरेव । उभाभ्यामपि देवपितृयज्ञाभ्यां संप्रीयमाणः श्रीमहाविष्णुरेव । ब्रह्मचर्यादि सकलाश्रमिभिरपि श्रीविष्णुसहस्र

Sri Vidyabharathi Book Centre, Sringeri

CC-O. In Public Domain. Digitized by eGangotri

नामस्तोत्रं सर्वथा पठनीयं भवति । वैदिकमार्गे सकलमत सम्प्रदायवर्तिनोऽपि सहस्रनाम स्तोत्रस्यास्य पठनपारायणपरा भवन्ति । सर्वैरपि मताचार्यैः महिमास्य स्तोत्रस्य प्रगीयतेतराम् । ईदृशमिदं पवित्राणां पवित्रं मङ्गलानां च मङ्गलं स्तोत्ररत्नं महिमानु वर्णनप्रबन्धैः साकं प्रकाशयितुं पुण्यकर्मणा जनतायाः धर्मश्रद्धां भगवद् भक्तिं च संवर्धयितुमप्युद्यताः अस्माकं मान्यमित्रवर्याः श्रीगङ्गाधर शास्त्रि महाशयाः सर्वथा प्रशंसाभाजनतां भजन्ति । भगवदनु ग्रहेण महाजनतायाः परिग्रहेण प्रोत्साहेन च शास्त्रिवर्याणां धर्मकार्याणि सर्वाण्यपि सुसम्पद्यन्तामित्याशंसनानि व्याहरन् मङ्गलमूर्तेः परमात्मनः स्मरणमङ्गलं मदीये मानसे सन्तनोमि ।

"आलोड्य सर्वशास्त्राणि विचार्य च पुनः पुनः ।
इदमेकं सुनिष्पन्नं ध्येयो नारायणः सदा ।।"

☆☆☆

Sri Vidyabharathi Book Centre, Sringeri

CC-O. In Public Domain. Digitized by eGangotri

ಶುಭಾಶಯಗಳೊಂದಿಗೆ

ಶ್ರೀಮತಿ ಡಿ.ಕೆ. ಲಲಿತಾ ಕೃಷ್ಣಮೂರ್ತಿ

ಶ್ರೀ ಚರಣ್ ಕೋ-ಆಪರೇಟೀವ್
ಬ್ಯಾಂಕ್ ನಿಯಮಿತ

ಎಸ್. ಶಿವಸ್ವಾಮಿ

ರೈನ್ ಬೊ ಕಲರ್ ಸ್ಕ್ಯಾನಿಂಗ್

ಶ್ರೀ ಗಣೇಶ್ ಎಂಟರ್‌ಪ್ರೈಸಸ್

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿಷ್ಣುಸಹಸ್ರನಾಮ ಯಜ್ಞಕ್ಕೆ ಶುಭಕೋರುವ :

ಮನೋನ್ಮಯಿ ಕ್ರೆಡಿಟ್ ಕೋ-ಆಪ್. ಸೊಸೈಟಿ ಲಿ.

MANONMAYI CREDIT CO-OP. SOCIETY LTD.

Old No. 272/2, New No. 275/2, 9th 'B' Main Road,
Hanumanthanagar, (Behind Kaggis Bakery)
Bangalore - 560 019. Phone : 6619645, 6674720

FIXED DEPOSIT INTEREST CHART

Above 6 Months	to	1 Year	14%
Above 1 Year	to	2 Years	15%
Above 2 Years	to	3 Years	16%
Above 3 Years	to	5 Years	17%
Above 5 Years			18%

YOUR MONEY DOUBLES IN 54 MONTHS

Sri Vidyabharathi Book Centre, Sringeri